Test, trial case. ನಮ್ಮ ನಾಯಕರು ಹೇಳಿದ ಹಾಗೆ, ಎಕ್ಸರ್‌ಸೈಜ್ ಆಯಿತು, ಅಲ್ಲಿ ಏತಕ್ಕೆ ಮಾಡಿದರು ? You have to look at the culprit. That is secondary. ಮಾನ್ಯ ಕೌಜಲಗಿಯವರು ಹೇಳಿದ್ದು ನಿಮ್ಮ ಛಲ ವಿದ್ಯಾರ್ಥಿಗಳ ಮೇಲೆ ಅಲ್ಲ. ವಿದ್ಯಾರ್ಥಿಗಳು ಸತ್ತರೆ ಸಾಧಾರಣವಾಗಿ ಭಾವುಕ ವಾತಾವರಣ ಉಂಟಾಗುತ್ತದೆ. ಆ ಒಂದು ಭಾವುಕತೆಯಿಂದ ಅವರು ಗಲಾಟೆ ಮಾಡುತ್ತಾರೆ. ಅಂಥ ಸಮಯದಲ್ಲಿ ತಕ್ಷಣ ಪೋಲೀಸರ ದಬ್ಬಾಳಿಕೆ ನಡೆಯುತ್ತದೆ. ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈ ಬಗ್ಗೆ ನೀವು ಅಧಿಕಾರಿಗಳನ್ನು ಕರೆದು ಚರ್ಚೆ ಮಾಡುವ ಅಗತ್ಯ ಇದೆಯೆಂದು ನನಗೆ ಅನ್ನಿಸುತ್ತದೆ.

ಅಯೋಧ್ಯೆ ಘಟನೆ ಬಗ್ಗೆ ಮುಂದುವರಿದ ಚರ್ಚೆ

ಶ್ರೀ ವೀರೇಂದ್ರ ಪಾಟೀಲ್ (ಚಿಂಚೋಳಿ):– ಮಾನ್ಯ ಸಭಾಧ್ಯಕ್ಷಿಣಿಯವರೆ, ತಮ್ಮ ಮತ್ತು ಸದನದ ಅನುಮತಿ ಕೋರಿ ನಾನು ಕುಳಿತ ಪರಿಸ್ಥಿತಿಯಲ್ಲೇ ಮಾತನಾಡುತ್ತೇನೆ. ತಾವು ಇದಕ್ಕೆ ಅನುಮತಿ ಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಕಳೆದ ಡಿಸೆಂಬರ್ 6ನೇ ತಾರೀಕು ಅಯೋಧ್ಯೆಯಲ್ಲಿ ಏನು ನಡೆಯಿತು ಅದು ನಮ್ಮ ದೇಶಕ್ಕೆ ದುರ್ದೈವದ ಸಂಗತಿ. ಮತ್ತು ಅದರಿಂದ ನಮ್ಮ ದೇಶಕ್ಕೆ ಒಂದು ಅನಾಹುತವಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಮೊದಲನೆಯ ಸಲ ನಮ್ಮ ದೇಶದ ಐಕ್ಯತೆ, ನಮ್ಮ ದೇಶದ ಧರ್ಮನಿರಪೇಕ್ಷತೆ, ಸೆಕ್ಯುಲರಿಸಂ ಇದರ ಮೇಲೆ ಪ್ರಹಾರವಾಗಿದೆ. ನಮ್ಮ ದೇಶ ದುರ್ದೈವದಿಂದ ಮೊದಲನೇ ಸಲ ಇಂಥ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂಬುದನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ.

ನಾನು 6ನೇ ತಾರೀಖು ನಂತರ ಟಿ.ವಿ. ನೋಡುತ್ತಾ ಇದ್ದೆ. ಅದರಲ್ಲಿ ಪ್ರತಿ ಶುಕ್ರವಾರ ಪ್ರಣಬ್ ರಾಯ್ ಎನ್ನುವವರು ವರ್ಲ್ಡ್ ದಿಸ್ ವೀಕ್ ಎನ್ನುವ ಒಂದು ಫೀಚರ್ ಹಾಕುತ್ತಾರೆ. ಅದನ್ನು ನೋಡಿದಾಗ ನಮ್ಮ ದೇಶದ ಪ್ರತಿಷ್ಠೆ, ಇಮೇಜ್ ಇಂಟರ್‌ನ್ಯಾಷನಲ್ ಲೆವೆಲ್‌ನಲ್ಲಿ 78 ಪರ್ಸೆಂಟ್ ಕಡಿಮೆಯಾಗಿದೆ ಎಂದು ಹೇಳಿದ್ದಾರೆ. ಇದು ನಾನು ತಮ್ಮ ಮುಂದೆ ಹೇಳುತ್ತಿಲ್ಲ. ಅವರು ಪಬ್ಲಿಕ್ ಒಪೀನಿಯನ್ ಸರ್ವೆ ಮಾಡಿ ಈ ಘಟನೆಯಿಂದ ಇಂಟರ್‌ನ್ಯಾಷನಲ್ ಲೆವೆಲ್‌ನಲ್ಲಿ ನಮ್ಮ ದೇಶದ ಇಮೇಜ್ 78 ಪರ್ಸೆಂಟ್ ಕಡಿಮೆ ಆಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ನಮ್ಮ ದೇಶದಲ್ಲಿ ಬಡತನ ಇದೆ. ನಮ್ಮ ದೇಶದಲ್ಲಿ ನಿರಕ್ಷರತೆ ಇದೆ. ನಮ್ಮ ದೇಶದಲ್ಲಿ ರೋಗರುಜಿನ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿವೆ ಎಂದು ನಾವು ಒಪ್ಪಿಕೊಳ್ಳಬೇಕು. ಆದರೆ ಒಂದು ಮಾತಿನಲ್ಲಿ ನಾವು ಎದೆ ತಟ್ಟಿ ನಿಂತು ಹೇಳುತ್ತಿದ್ದೇವೆ. ಅದೇನೆಂದರೆ, ನಮ್ಮ ದೇಶ; India is the largest secular democratic country in the world ಎಂದು. ಇವತ್ತು ಅದಕ್ಕೇ ಧಕ್ಕೆ ಬಂದಿದೆ ಎನ್ನುವ ಪರಿಸ್ಥಿತಿ ಉದ್ಭವವಾಗಿದೆ ಎಂದು ಖೇದದಿಂದ ಹೇಳಬೇಕಾಗಿದೆ. ನಮ್ಮೆಲ್ಲರಿಗೂ, ಎಲ್ಲಾ ರಾಜಕೀಯ ಪಕ್ಷಗಳಿಗೂ ಇದು ಒಂದು ದೊಡ್ಡ ಛಾಲೆಂಜ್ ಆಗಿ ಪರಿಣಮಿಸಿದೆ. ಅದನ್ನು ಎದುರಿಸುವುದರಲ್ಲಿ ಏನಾದರೂ ನಾವು ವಿಫಲರಾದರೆ, ಬಹುಶಃ ನಮ್ಮ ದೇಶದ ಐಕ್ಯತೆ ಮತ್ತು ನಮ್ಮ ದೇಶದ ಸೆಕ್ಯುಲರಿಸಂಗೆ ದೊಡ್ಡ ಧಕ್ಕೆ ಬರುತ್ತದೆಂದು ನಾನು ಹೇಳುತ್ತೇನೆ. ಇವತ್ತು ನಮ್ಮ ದೇಶದಲ್ಲಿ respectability for authority and respectability for Law and Order ಏಕೆ ಕಡಿಮೆಯಾಗುತ್ತಾ ಇದೆ, ಇದನ್ನು ತಾವೆಲ್ಲರೂ ವಿಚಾರ ಮಾಡಬೇಕು ಮತ್ತು ನಮ್ಮ ದೇಶದ ಜನರು ವಿಚಾರ ಮಾಡಬೇಕು. ನಮ್ಮ ದೇಶದಲ್ಲಿ ನಾವು ಏನು ನೋಡುತ್ತಿದ್ದೇವೆ ? Terrorism; Regionalism, communalism, ಹೆಚ್ಚು ಆಗುತ್ತಿರುವುದನ್ನು ನೋಡುತ್ತಿದ್ದೇವೆ. Law and order problem and respectability for law and order ಕಡಿಮೆ ಆಗುವುದು ನಾವು ನೋಡುತ್ತಿದ್ದೇವೆ. ಇದರ ಬಗ್ಗೆ ಯೋಚನೆ ಮಾಡಬೇಕು.

ಅಯೋಧ್ಯೆಯಲ್ಲಿ ಹೀಗೆ ಆಯಿತು ಹಾಗೆ ಆಗಿದೆ ಎಂದು ಹೇಳುವುದರಲ್ಲಿ ವಿಚಾರವಿಲ್ಲ. ಏಕೆ ಇದು ಕಡಿಮೆ ಆಗುತ್ತಾ ಇದೆ ಎಂದು ಯೋಚನೆ ಮಾಡಬೇಕು. ಲಾ ಅಂಡ್ ಆರ್ಡರ್ ರೆಸ್ಪಾನ್ಸಿಬಿಲಿಟಿ ಮತ್ತು ಅಥಾರಿಟಿಸ್ ರೆಸ್ಪಾನ್ಸಿಬಿಲಿಟಿ ಹೆಚ್ಚು ಮಾಡುವುದಕ್ಕೆ ಏನು ಪ್ರಯತ್ನ ಮಾಡಬೇಕೆನ್ನುವ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳೂ ಕೂಡಿ ಇದರ ಬಗ್ಗೆ ವಿಚಾರ ಮಾಡಬೇಕು. ನಮ್ಮ ದೇಶದಲ್ಲಿ ಇದು ಒಂದು ದೊಡ್ಡ ಸಂಗತಿ ಎಂದು ನನಗನ್ನಿಸುತ್ತದೆ. ನಮ್ಮ ದೇಶವನ್ನು ಒಡೆಯಬೇಕು, ನಮ್ಮ ದೇಶದಿಂದ ದೂರ ಆಗಬೇಕು, ನಾವು ಇಂಡಿಪೆಂಡೆಂಟ್ ದೇಶ ಆಗಬೇಕೆನ್ನುವಂಥ ಶಕ್ತಿಗಳು ನಮ್ಮ ದೇಶದಲ್ಲಿ ಬೇಳೆಯುತ್ತಾ ಇರುವುದನ್ನು ನಾವು ನೋಡುತ್ತಿದ್ದೇವೆ. ಯಾವುದೇ ಒಂದು ದೇಶದಲ್ಲಿ ಅದರ ಸ್ವಾತಂತ್ರ್ಯ ಅದರ ಡೆಮಾಕ್ರಸಿ ಹೊಡೆದರೆ ಎಲ್ಲಾ ರಾಜಕೀಯ ಪಕ್ಷಗಳೂ ಉರುಳುತ್ತವೆ. ದೇಶ ಮುಖ್ಯ, ನಾವು ದೇಶದ ಬಗ್ಗೆ ಮೊದಲು ಚಿಂತನೆ ಮಾಡಬೇಕು. ಆ ನಂತರ ನಮ್ಮ ನಮ್ಮ ಪಕ್ಷಗಳ ಬಗ್ಗೆ ಚಿಂತನೆ ಮಾಡಬೇಕು. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ದುರ್ದೈವದ ಸಂಗತಿ ಏನೆಂದರೆ, ನಾವು ನಮ್ಮ ನಮ್ಮ ಪಕ್ಷಗಳ ಬಗ್ಗೆ ವಿಚಾರ ಮಾಡುತ್ತಿದ್ದಾರೆಯೇ ಹೊರತು, ಈ ದೇಶದ ಬಗ್ಗೆ ವಿಚಾರ ಮಾಡುವ ಜನರು ಬಹಳ ಕಡಿಮೆಯಾಗುತ್ತಿದ್ದಾರೆ. ಇದರಿಂದ ನಮ್ಮ ಪಕ್ಷಕ್ಕೆ ಏನು ಲಾಭವಾಗುತ್ತದೆ, ಯಾವ ರೀತಿಯಿಂದ ನಮ್ಮ ಪಕ್ಷ ಬೆಳೆಯುತ್ತದೆ ಎಂದು ನಾವು ವಿಚಾರ ಮಾಡುತ್ತಿದ್ದೇವೆಯೇ ಹೊರತು ದೇಶದ ಬಗ್ಗೆ ವಿಚಾರ ಮಾಡುತ್ತಾ ಇಲ್ಲ.

ಒಂದು ವೇಳೆ ದೇಶವೇ ಹೋದರೆ ಯಾರು ಉಳಿಯುತ್ತಾರೆ ? ದೇಶ 1947ರ ತನಕ ಒಂದಿತ್ತು. ಆಮೇಲೆ ಎರಡು ಭಾಗ ಆಯಿತು. ಒಂದು ಪಾಕಿಸ್ತಾನ ಆಯಿತು, ಮತ್ತೊಂದು ಹಿಂದೂಸ್ಥಾನ ಆಯಿತು. ಅಲ್ಲಿಂದ 1971 ರಲ್ಲಿ ಈಸ್ಟ್ ಪಾಕಿಸ್ತಾನ ಇದ್ದದ್ದು ಅವರು ಏನು ಹೇಳುತ್ತಾರೆ ಅದು ನಮಗೆ ಸಂಬಂಧವಿಲ್ಲ ಅವರು ನಾವು ಬೇರೆ ಇರುತ್ತೇವೆಂದು ಹೇಳಿದರು. ದೇಶವೇ ಹೊರಟು ಹೋದರೆ ನಾವು ನೀವು ಎಲ್ಲಿ ಇರುತ್ತೇವೆ ? ದೇಶದಲ್ಲಿರುವ ಡೆಮಾಕ್ರಸಿ ಹೊರಟು ಹೋದರೆ ನಾವು ನೀವು ಎಲ್ಲಿರುತ್ತೇವೆ ? ನಾವು ಅದನ್ನು ವಿಚಾರ ಮಾಡಬೇಕು. ನಮ್ಮ ಪಕ್ಷದ ಬಗ್ಗೆ ವಿಚಾರ ಮಾಡಬಾರದು. ದೇಶದ ಬಗ್ಗೆ ವಿಚಾರ ಮಾಡಬೇಕು. ಅನಂತರ ಪಕ್ಷದ ಬಗ್ಗೆ ವಿಚಾರ ಮಾಡಬೇಕು. ಪಕ್ಷ ಬೇಡವೆಂದು ನಾನು ಹೇಳುವ ಹಾಗೆ ಇಲ್ಲ. ಆದರೆ ದೇಶ ಮೇಲೆಯೇ ಹೊರತಾಗಿ ಪಕ್ಷ ಮೇಲಲ್ಲ. ಅದಕ್ಕಾಗಿ ಮೊದಲು ದೇಶದ ಬಗ್ಗೆ ವಿಚಾರ ಮಾಡಬೇಕು ಎನ್ನುವಂತಹ ಮಾತನ್ನು ನಾನು ಕಳಕಳಿಯಿಂದ ಹೇಳುತ್ತಿದ್ದೇನೆ. ಡಿಸೆಂಬರ್ 6ನೇ ತಾರೀಖು ಅಯೋಧ್ಯೆಯಲ್ಲಿ ನಡೆದಂತಹ ಘಟನೆ ಅದೊಂದು ದುರ್ದೈವದ ಘಟನೆ ಎನ್ನುವ ಮಾತನ್ನು ಈಗಾಗಲೇ ಹೇಳಿದ್ದೇನೆ. ಕೇಂದ್ರ ಸರ್ಕಾರದವರು ಮೂರು ನಿರ್ಣಯಗಳನ್ನು ತೆಗೆದುಕೊಂಡರು. ಅದು ಏನೆಂದರೆ, ಐದು ಕಮ್ಯುನಲ್ ಪಾರ್ಟಿಗಳನ್ನು ಬ್ಯಾನ್ ಮಾಡಿದ್ದಾರೆ. ಅಲ್ಲಿಂದ ಎರಡನೆಯದು ಬಿಜೆಪಿ ಆಡಳಿತವಿದ್ದಂತಹ ಎಲ್ಲ ರಾಜ್ಯಗಳಲ್ಲಿ ಪ್ರೆಸಿಡೆಂಟ್ ರೂಲ್ ಬಂದಿದೆ. ಉತ್ತರಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಹಿಮಾಚಲಪ್ರದೇಶ. ಈ ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಪಕ್ಷದ ಸರ್ಕಾರಗಳು ಇದ್ದವು. ಈಗ ಆ ಸರ್ಕಾರಗಳು ಹೋಗಿ ಅಲ್ಲಿ ಪ್ರೆಸಿಡೆಂಟ್ ರೂಲ್ ಬಂದಿದೆ. ಎಲೆಕ್ಷನ್ ಕಮೀಷನರ್‌ರವರು, ನಾನು ಎಲೆಕ್ಷನ್ ಮಾಡಿಸುತ್ತೇನೆ, ಯಾವಾಗ ಎಲೆಕ್ಷನ್ ಮಾಡಬೇಕು ಎನ್ನುವ ನಿರ್ಣಯ ನಾನು ಮಾಡುತ್ತೇನೆಯೇ ಹೊರತಾಗಿ ಕೇಂದ್ರ ಸರ್ಕಾರದವರು ಮಾಡುವ ಹಾಗೆ ಇಲ್ಲವೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದ ಒಬ್ಬ ಮಂತ್ರಿಗಳು ಒಂದು ವರ್ಷದಲ್ಲಿ ಎಲೆಕ್ಷನ್ ಮಾಡಿಸುತ್ತೇವೆಂದು ಹೇಳುತ್ತಾರೆ. ನಾನು 15– 16 ವರ್ಷಗಳ ಕಾಲ ಪಾರ್ಲಿಮೆಂಟಿನಲ್ಲಿದ್ದೆ. ನನಗೆ ಗೊತ್ತಿದ್ದ ಹಾಗೆ, ಆರು ತಿಂಗಳಿಗಿಂತ ಹೆಚ್ಚು ಟೈಮ್ ಪ್ರೆಸಿಡೆಂಟ್ ರೂಲ್ ಮುಂದೆ ಹೋಗುವ ಹಾಗೆ ಇಲ್ಲ. ಆರು ತಿಂಗಳಿಗಿಂತ ಹೆಚ್ಚು ಕಾಲ ಮುಂದೆ ಹಾಕಿದರೆ ಪಾರ್ಲಿಮೆಂಟ್‌ನಲ್ಲಿ ಅಪ್ರೂವಲ್ ತೆಗೆದುಕೊಳ್ಳಬೇಕಾಗುತ್ತದೆ. ಒಂದು ವರ್ಷ ಟೈಮ್ ಕೊಡಿರಿ ಅಂದರೆ, ಆರು ತಿಂಗಳ ನಂತರ ಬನ್ನಿ ಮತ್ತು ಏತಕ್ಕೆ ಬೇಕೆಂದು ನಮಗೆ ಕನ್ವಿನ್ಸ್

ಮಾಡಿದರೆ ಆರು ತಿಂಗಳು ಮಾತ್ರ ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತಾರೆ. ಇದು ನನ್ನ ಅನುಭವಕ್ಕೆ ಬಂದಂತಹ ವಿಚಾರ. ಸ್ಥಿತಿ ಹೀಗಿದ್ದಾಗ ಎಲೆಕ್ಷನ್ ಕಮೀಷನರ್‌ರವರು ಒಂದು ಹೇಳುತ್ತಾರೆ. ಕೇಂದ್ರ ಸರ್ಕಾರದ ಮಂತ್ರಿಗಳು ಒಂದು ರೀತಿಯಿಂದ ಹೇಳುತ್ತಾರೆ. ಇದು ಏನೆಂದು ಗೊತ್ತಿಲ್ಲ. ಅಂತೂ ನಾಲ್ಕು ರಾಜ್ಯಗಳಲ್ಲಿ ಬಿ.ಜೆ.ಪಿ ಸರ್ಕಾರ ಏನಿತ್ತು ಅದನ್ನು ವಜಾ ಮಾಡಿದ್ದಾರೆ. ಈಗ ನಾಲ್ಕು ರಾಜ್ಯಗಳಲ್ಲಿ ಪ್ರೆಸಿಡೆಂಟ್ ರೂಲ್ ಇದೆ. ಕೇಂದ್ರ ಸರ್ಕಾರದವರು ಮೊನ್ನೆ ಒಂದು ನಿರ್ಣಯ ಮಾಡಿದರು. ಅದು ಏನೆಂದರೆ, ಆ ಜಾಗದಲ್ಲಿ ಬಾಬ್ರಿ ಮಸೀದಿ ಮತ್ತು ಒಂದು ಟೆಂಪಲ್ ಎರಡನ್ನೂ ಕಟ್ಟಿಸುತ್ತೇವೆ ಎನ್ನುವ ಒಂದು ನಿರ್ಣಯ ಮಾಡಿ, ಘೋಷಣೆ ಮಾಡಿದ್ದಾರೆ. ಅದರ ಬಗ್ಗೆ ನಾನು ಹೆಚ್ಚು ಹೇಳುವ ಹಾಗೆ ಇಲ್ಲ. ಏಕೆಂದರೆ, ಪ್ರತಿ ದಿವಸ ಒಂದೊಂದು ಸ್ಟೇಟ್‌ಮೆಂಟ್ ಬರುತ್ತಾ ಇದೆ. ಯಾವುದೂ ಫೈನಲ್ ಎಂದು ಗೊತ್ತಾಗುವುದಿಲ್ಲ. ಮೊದಲು ಹೇಳಿದ್ದು ಫೈನಲ್ಲೊ, ಈಗ ಹೇಳಿದ್ದು ಫೈನಲ್ಲೊ ಅದು ಯಾವುದೂ ಫೈನಲ್ ಎಂದು ಗೊತ್ತಾಗುವುದಿಲ್ಲ. ಆದರೂ ಈ ಮೂರು ಕ್ರಮಗಳನ್ನು ತೆಗೆದುಕೊಂಡಿದ್ದು ನಮಗೆಲ್ಲರಿಗೂ ಗೊತ್ತಿದೆ. ನಾವು ಪತ್ರಿಕೆಗಳನ್ನು ಓದಿದ್ದೇವೆ. ಈಗ ಐದು ಕಮ್ಯುನಲ್ ಪಾರ್ಟಿಗಳನ್ನು ಬ್ಯಾನ್ ಮಾಡಿದ್ದಾರೆ. ಆದರೆ ನಮ್ಮ ದೇಶದಲ್ಲಿ ಐದು ಕಮ್ಯುನಲ್ ಪಾರ್ಟಿಗಳು ಮಾತ್ರ ಇವೆಯೇ ಎನ್ನುವ ಪ್ರಶ್ನೆ ಇದೆ. ಎಲ್ಲ ಕಮ್ಯುನಲ್ ಪಾರ್ಟಿಗಳು ಬ್ಯಾನ್ ಆದರೆ ನಮಗೆ ವ್ಯಥೆ ಇಲ್ಲ. ನಮಗೆ ಅದರಿಂದ ದುಃಖ ಆಗಲಿಕ್ಕಿಲ್ಲ. ಆದರೆ ಪಿಕ್ ಅಂಡ್ ಚ್ಯೂಸ್ ಮಾಡಿ ಕೆಲವು ಪಾರ್ಟಿಗಳನ್ನು ಮಾತ್ರ ಬ್ಯಾನ್ ಮಾಡಿದರೆ ನಮಗೆ ದುಃಖವಾಗುತ್ತದೆ. ಕೆಲವು ಪಾರ್ಟಿಗಳನ್ನು ಬ್ಯಾನ್ ಮಾಡುವುದು, ಕೆಲವು ಪಾರ್ಟಿಗಳನ್ನು ಬ್ಯಾನ್ ಮಾಡಲಾರದೆ ಇರುವುದು, ಕೆಲವು ಪಾರ್ಟಿಗಳನ್ನು ಅವುಗಳಿಂದ ನಮಗೆ ಅನುಕೂಲವಿಲ್ಲವೆಂದು ಬ್ಯಾನ್ ಮಾಡಬೇಕು ಎನ್ನುವುದು ಸರಿಯಾದುದಲ್ಲವೆಂದು ನನಗನ್ನಿಸುತ್ತದೆ. ದುರ್ದೈವದಿಂದ ನಮ್ಮ ದೇಶದಲ್ಲಿ ಐದಕ್ಕಿಂತ ಹೆಚ್ಚು ಕಮ್ಯುನಲ್ ಪಾರ್ಟಿಗಳು ಇವೆ. ಆ ಎಲ್ಲಾ ಕಮ್ಯುನಲ್ ಪಾರ್ಟಿಗಳು ಬ್ಯಾನ್ ಆದರೆ ನಮಗೆ ಅಡ್ಡಿಯಿಲ್ಲ. ಎಲ್ಲ ಕಮ್ಯುನಲ್ ಪಾರ್ಟಿಗಳು ಬ್ಯಾನ್ ಆಗಬೇಕೆಂದು ನಾನು ಹೇಳುತ್ತಿದ್ದೇನೆ. ಆದರೆ ಕೆಲವು ಪಾರ್ಟಿಗಳನ್ನು ಬ್ಯಾನ್ ಮಾಡುವುದು, ಕೆಲವನ್ನು ಹಾಗೆಯೇ ಇಡುವುದು ತಪ್ಪಾಗುತ್ತದೆ. ಈ ರೀತಿ ಮಾಡಬಾರದೆಂದು ನಾನು ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ನಾನು ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಆಥವಾ ಆದಾದ ಮೇಲೆ ಮಾತನಾಡುವ ಮುಂದೆ ಹೇಳುತ್ತಿದ್ದೆ. ನಾವು ಯಾರಿಗಾದರೂ ಒಂದು ಬೆಟ್ಟು ತೋರಿಸಿದರೆ ಮೂರು ಬೆಟ್ಟುಗಳು ನಮ್ಮ ಕಡೆ ತೋರಿಸಿ ಮೊದಲು ನೀನು ವಿಚಾರ ಮಾಡು ಎಂದು ಹೇಳುತ್ತವೆ. ಈ ಪರಿಸ್ಥಿತಿ ನಮ್ಮದು ಇದೆ. ಏನು ಹೇಳುತ್ತಿದ್ದೇನೆ ಎಂದರೆ, ನಮ್ಮ ದೇಶದಲ್ಲಿ ಕಮ್ಯುನಲ್ ಪಾರ್ಟೀಸ್ ಇರಬಾರದು. ಆದರೆ ನಾವೇ ಕಮ್ಯುನಲ್ ಪಾರ್ಟಿ ಜೊತೆಗೆ ಹೊಂದಾಣಿಕೆ ಮಾಡಿಕೊಂಡರೆ ನಮಗೆ ಹೇಳುವ ಅಧಿಕಾರ ಇಲ್ಲ. ಈ ಪ್ರಶ್ನೆ ಬರುತ್ತದೆ. ನಾವು ಹೊಂದಾಣಿಕೆ ಮಾಡಿಕೊಂಡಿಲ್ಲ ಎಂದು ಕೇಂದ್ರ ಸರ್ಕಾರದವರು ಹೇಳಲಿ ಅಥವಾ ನಮ್ಮ ಪಾರ್ಟಿ ಮುಖಂಡರು ಹೇಳಲಿ. ನಾನು ಒಪ್ಪುವುದಕ್ಕೆ ತಯಾರಿದ್ದೇನೆ. ಆದರೆ ನಾವೇ ಎರಡನೇ ಕಮ್ಯುನಲ್ ಪಾರ್ಟಿ ಜೊತೆಗೆ ಹೊಂದಾಣಿಕೆ ಮಾಡಿಕೊಂಡು, ಬೇರೆ ಕಮ್ಯುನಲ್ ಪಾರ್ಟಿ ಜೊತೆ ಹೊಂದಾಣಿಕೆ ಮಾಡಬಾರದು ಎಂದು ಹೇಳುವ ಅಧಿಕಾರ ನಮಗೆ ಎಲ್ಲಿ ಉಳಿಯುತ್ತದೆ. ಅದಕ್ಕಾಗಿ ಆ ಅಧಿಕಾರ ನಮಗೆ ಉಳಿಯಬೇಕು ಎಂದರೆ ಎಲ್ಲ ಕಮ್ಯುನಲ್ ಪಾರ್ಟಿಗಳು ಬ್ಯಾನ್ ಆಗಬೇಕು. ನಮ್ಮ ದೇಶದಲ್ಲಿ ಕಮ್ಯುನಲ್ ಪಾರ್ಟೀಸ್ ಇರಲೇಬಾರದು. ಕಮ್ಯುನಲ್ ಪಾರ್ಟೀಸ್ ಎಲ್ಲಿಯವರೆಗೆ ಇರುತ್ತವೆ, ಅಲ್ಲಿಯವರೆಗೆ ಅವರಿಗೆ ಅವಕಾಶ ಇಲ್ಲವೆನ್ನುವಂಥ ವಾತಾವರಣವನ್ನು ನಮ್ಮ ದೇಶದ ಎಲ್ಲ ಜನ ತಯಾರು ಮಾಡಬೇಕು, ಕೇಂದ್ರ ಸರ್ಕಾರದವರು

ತಯಾರು ಮಾಡಬೇಕು, ರಾಜ್ಯ ಸರ್ಕಾರಗಳವರು ತಯಾರು ಮಾಡಬೇಕು. ಜನಸಾಮಾನ್ಯರು ತಯಾರು ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಈಗ ಐದು ಕಮ್ಯುನಲ್ ಪಾರ್ಟಿಗಳನ್ನು ಬ್ಯಾನ್ ಮಾಡಿದ್ದಾರೆ. ಎಲ್ಲದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಂದರ ಬಗ್ಗೆ ನಾನು ಹೇಳುತ್ತೇನೆ: ಅದು ಈ ಆರ್.ಎಸ್.ಎಸ್. ಆರ್.ಎಸ್.ಎಸ್. ಬ್ಯಾನ್ ಆಗುತ್ತಿರುವುದು ಇದು ಮೂರನೇ ಸಲ. ಹಿಂದೆ 1949 ರಲ್ಲಿ ಬ್ಯಾನ್ ಆಯಿತು, ನಂತರ 1975 ರಲ್ಲಿ ಬ್ಯಾನ್ ಆಯಿತು ಮತ್ತು ಈಗ ಬ್ಯಾನ್ ಆಗಿದೆ. ಈ ಬ್ಯಾನ್ ಇದೆಯೋ ಅಥವಾ ಇದನ್ನು ಬ್ಯಾನ್ ಮಾಡುವುದರಿಂದ ಇದರ ಶಕ್ತಿ ಕುಂದಿದೆಯೋ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಅನೇಕ ಜನ ಹೇಳುತ್ತಿದ್ದಾರೆ ಏನೆಂದರೆ ಈಗ ಅನೇಕ ಕಮ್ಯುನಲ್ ಪಾರ್ಟಿಗಳನ್ನು ಬ್ಯಾನ್ ಮಾಡಿದರು; ಅನೇಕ ಜನರನ್ನು ಜೈಲಿಗೆ ಹಾಕಿದರು. ಆದರೆ ಅವರೆಲ್ಲ ಕೋರ್ಟಿಗೆ ಹೋದರು. ನಾನು ಮೊನ್ನೆ ಒಂದು ಪೇಪರ್‌ನಲ್ಲಿ ನೋಡಿದೆ. ಇವರಲ್ಲಿ 70 ಪರ್ಸೆಂಟ್ ಜನರನ್ನು ಜೈಲಿನಿಂದ ಬಿಟ್ಟುಬಿಟ್ಟಿದ್ದಾರೆ ಎಂದು ಇತ್ತು. ನಮಗೆ ಬರೇ ಪೇಪರ್‌ನಲ್ಲಿ ಬ್ಯಾನ್ ಬೇಕಾಗಿಲ್ಲ. ಇದು ನಿಜವಾದ ಬ್ಯಾನ್ ಆಗಬೇಕೇ ಹೊರತು ಪೇಪರ್‌ನಲ್ಲಿ ಬ್ಯಾನ್ ಆಗಬಾರದು. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಎಲ್ಲ ಕಮ್ಯುನಲ್ ಪಾರ್ಟೀಸ್ ಬಗ್ಗೆ ನಾನು ಹೇಳುವಹಾಗಿಲ್ಲ. ಅದಕ್ಕೆ ಸಮಯ ಬೇಕಾಗುತ್ತದೆ. ಆದರೆ ಈ ಆರ್.ಎಸ್.ಎಸ್. ಮೂರು ಸಲ ಬ್ಯಾನ್ ಆಗಿದೆ. ಇದಕ್ಕೂ ಮೊದಲು ಎರಡು ಸಲ ಬ್ಯಾನ್ ಆಗಿತ್ತು. ಅದು ಬೆಳೆಯಿತೇ ಇಲ್ಲವೇ ಎಂದು ಬ್ಯಾನ್ ಮಾಡಿದ್ದವರು ಜನರಿಗೆ ಹೇಳಬೇಕೋ ಬೇಡವೋ ? ಬ್ಯಾನ್ ಮಾಡುವುದರಿಂದ ಅದರ ಶಕ್ತಿ ಕಡಿಮೆಯಾಗುತ್ತದೆ. ಹಿಂದೆ ಕಡಿಮೆಯಾಗಿತ್ತು ಎಂದಾದರೂ ಹೇಳಬೇಕಾಗುತ್ತದೆ. ಆದರೆ ನಾನು ಕೇಳಿದ್ದೇನೆ, ಇದರ ಶಕ್ತಿ ಬೆಳೆಯಿತೇ ಹೊರತು ಕಡಿಮೆಯಾಗಿಲ್ಲ ಎಂದು. ಒಂದು ವೇಳೆ ಅದರ ಶಕ್ತಿ ಬೆಳೆದಿದ್ದರೆ ಈ ರೀತಿ ಬ್ಯಾನ್ ಮಾಡುವುದರಲ್ಲಿ ಅರ್ಥ ಏನಿದೆ ? ಬ್ಯಾನ್ ಮಾಡಿ blessing in disguise ಆದಂಥ ಅವರಿಗೆ ನೀವು ಮತ್ತೆ ಏನೋ ಮಾಡಿದ ಹಾಗೆ ಆಯಿತು. ಅವರಿಗೆ ಮೊದಲೇ ಅಬ್ಜೆಕ್ಟಿವ್ ಕುಂದುತ್ತಿತ್ತು. ಇದರಿಂದ ಅದರ ಶಕ್ತಿ ಹೆಚ್ಚು ಆದಹಾಗೆ ಆಯಿತು. ಅದರ ಸಲುವಾಗಿ ಬ್ಯಾನ್ ಮಾಡುವಾಗ ನಿಜವಾಗಿ ಬ್ಯಾನ್ ಮಾಡಬೇಕೇ ಹೊರತು ಪೇಪರ್ ಮೇಲೆ ಬ್ಯಾನ್ ಇರಬಾರದು ಎಂದು ನಾನು ಹೇಳುತ್ತೇನೆ.

ಈಗ ಆ ಒಂದು ಜಾಗದಲ್ಲಿ ಮಂದಿರ ಬರಬೇಕೋ, ಮಸೀದಿ ಬರಬೇಕೋ ಅಥವಾ ಎರಡೂ ಬರಬೇಕೋ ಎನ್ನುವಂಥಾದ್ದು ಸ್ಟೇಟ್ ಸಬ್ಜೆಕ್ಟ್. ನಾನು ಮುಖ್ಯಮಂತ್ರಿಯಾಗಿ ಕೆಲವು ದಿವಸ ಕೆಲಸ ಮಾಡಿದ್ದೇನೆ.

ಇದು ಸ್ಟೇಟ್ ಸಬ್ಜೆಕ್ಟ್, ಸೆಂಟ್ರಲ್ ಸಬ್ಜೆಕ್ಟ್ ಅಲ್ಲ. ಈ ರೀತಿ ಸ್ಟೇಟ್ ಸಬ್ಜೆಕ್ಟ್ ಇದ್ದಾಗ ಅದು ಸೆಂಟ್ರಲ್ ಸಬ್ಜೆಕ್ಟ್ ಹೇಗೆ ಆಯಿತು ಎನ್ನುವಂಥ ಪ್ರಶ್ನೆ ಬರುತ್ತದೆ. ತಮಗೆ ಹೇಳಬೇಕಾದರೆ, ಅನೇಕ ರಾಜಕೀಯ ಪಕ್ಷಗಳು ಎಲೆಕ್ಷನ್ ಬಂದಾಗ ಎಲೆಕ್ಷನ್ ಮ್ಯಾನಿಫೆಸ್ಟೋದಲ್ಲಿ ಸಿಕ್ಕಾಪಟ್ಟೆ ಎಲ್ಲಾ ಬರೆಯುತ್ತಾರೆ. ಏಕೆ ಬರೆಯುತ್ತಾರೆ ಎಂದರೆ, ಅವರಿಗೆ ಗೊತ್ತಿರುತ್ತದೆ. ನಾವು ಅಧಿಕಾರಕ್ಕೆ ಬರುವ ಹಾಗಿಲ್ಲ, ಬರೆದರೆ ತಪ್ಪಾಗುವ ಹಾಗಿಲ್ಲ– ಈ ರೀತಿಯಾದ ಭಾವನೆ ಇರುತ್ತದೆ. ಆದ್ದರಿಂದ ಎಲೆಕ್ಷನ್ ಮ್ಯಾನಿಫೆಸ್ಟೋನಲ್ಲಿ ಸಿಕ್ಕಾಪಟ್ಟೆ ಬರೆಯುತ್ತಾರೆ.

ಬಿ.ಜೆ.ಪಿ.ಯವರಿಗೆ ಉತ್ತರಪ್ರದೇಶದಲ್ಲಿ ಅಧಿಕಾರಕ್ಕೆ ಬರುತ್ತೇವೆಂದು ಅನಿಸಿರಲಿಲ್ಲ. ಅವರು ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಅಧಿಕಾರಕ್ಕೆ ಬಂದರೆ, ಮಸೀದಿ ಜಾಗದಲ್ಲಿ ಮಂದಿರ ಕಟ್ಟುತ್ತೇವೆಂದು ಬರೆದಿದ್ದರೆಂದು ನಾನು ಕೇಳಿದ್ದೇನೆ. ಅವರು ಬರೆದಿದ್ದರೋ ಅಥವಾ ಅವರ ಪಾರ್ಟಿಯವರು ಹೇಳಿಕೊಳ್ಳುತ್ತಾರೋ ನನಗೆ ಗೊತ್ತಿಲ್ಲ. ಅವರು ಚುನಾವಣಾ ಪ್ರಣಾಳಿಕೆಯಲ್ಲಿ ಬರೆದರು, ಈ ರೀತಿ ಬರೆದ ಮೇಲೆ ಅವರ ಕೈಗೆ ಅಧಿಕಾರ ಬಂತು, ಅವರ ಪಾರ್ಟಿಯವರೇ ಮುಖ್ಯಮಂತ್ರಿಯಾದರು. ಈ ರೀತಿ ನಾವು ಜನರಿಗೆ ಭರವಸೆ ಕೊಟ್ಟಿದ್ದೇವೆ, ಜನರು ನಮಗೆ ಅಧಿಕಾರ ಕೊಟ್ಟಿದ್ದಾರೆ, ಇದನ್ನು ಯಾವ ರೀತಿ ಇಂಪ್ಲಿಮೆಂಟ್ ಮಾಡಬೇಕೆಂದು ಅವರು ಪೇಚಿನಲ್ಲಿ ಬಿದ್ದಾಗ ಕೇಂದ್ರ ಸರ್ಕಾರದವರು, ನೀವು ಏಕೆ ಚುನಾವಣಾ ಪ್ರಣಾಳಿಕೆಯಲ್ಲಿ ಬರೆದಿರಿ, ನಿಮ್ಮ ಹೆಡ್‌ಏಕನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು ತಮ್ಮ ತಲೆ ಮೇಲೆ ಈ ಜವಾಬ್ದಾರಿಯನ್ನು ತೆಗೆದುಕೊಂಡರು. ನಿಮಗೆ ಹೇಳಬೇಕಾದರೆ ಇದು ರಾಜ್ಯದ ವಿಷಯವೇ ಹೊರತು, ಕೇಂದ್ರದ ವಿಷಯವಲ್ಲ. ಒಂದು ಜಾಗದಲ್ಲಿ ಏನು ಸ್ಟ್ರಕ್ಚರ್, ಏನು ಬರಬೇಕು, ಯಾವುದು ಬರಬೇಕು, ಮಂದಿರ ಬರಬೇಕೋ ಅಥವಾ ಮಸೀದಿ ಬರಬೇಕೋ ಎನ್ನುವಂಥಾದ್ದನ್ನು ರಾಜ್ಯಸರ್ಕಾರದವರು ನಿರ್ಣಯ ಮಾಡಬೇಕೇ ಹೊರತು, ಇದರ ಬಗ್ಗೆ ಕೇಂದ್ರ ಸರ್ಕಾರದವರು ನಿರ್ಣಯ ಮಾಡಬೇಕಾಗಿಲ್ಲ. ಯಾವಾಗ ಕೇಂದ್ರ ಸರ್ಕಾರದವರು ಈ ಜವಾಬ್ದಾರಿಯನ್ನು, ನಾವು ತೆಗೆದುಕೊಳ್ಳುತ್ತೇವೆಂದು ಹೇಳಿದಾಗ, ಬಿ.ಜೆ.ಪಿ.ಯವರು ಬಹಳ ಸಂತೋಷದಿಂದ ನೀವೇ ತೆಗೆದುಕೊಳ್ಳಿ ಎಂದು ಅವರಿಗೇ ಈ ಜವಾಬ್ದಾರಿಯನ್ನು ವಹಿಸಿಕೊಟ್ಟರು. ಇದರಿಂದ ಕೇಂದ್ರ ಸರ್ಕಾರದವರು ಜವಾಬ್ದಾರಿ ತೆಗೆದುಕೊಂಡಿದ್ದಾರೆ, ನಾವು ಏಕೆ ಇದರ ಬಗ್ಗೆ ವಿಚಾರ ಮಾಡಬೇಕು, ಕೇಂದ್ರ ಸರ್ಕಾದವರೇ ಏನಾದರೂ ಮಾಡಿಕೊಂಡು ಹೋಗಲಿ ಎಂದು ಆ ಜವಾಬ್ದಾರಿಯಿಂದ ಇವರು ಹೊರಗೆ ಬಂದರು. 6ನೇ ಡಿಸೆಂಬರ್ ಈ ಅಘಾತವಾದ ಮೇಲೆ ನಮ್ಮ ಪ್ರಧಾನ ಮಂತ್ರಿಯವರು ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಏನು ಸ್ಟೇಟ್‌ಮೆಂಟ್ ಮಾಡಿದ್ದಾರೆಂದರೆ, ಬಿ.ಜೆ.ಪಿ.ಯವರು ದೇಶದ್ರೋಹ ಮಾಡಿದರು, ಬಿ.ಜೆ.ಪಿ.ಯವರು ನಮಗೆ ಧೋಕಾ ಮಾಡಿದರು. ನಾವು ಬಿ.ಜೆ.ಪಿಯವರ ಮೇಲೆ ವಿಶ್ವಾಸ ಮಾಡಿದ್ದೆವು. ಅದಕ್ಕೆ, ಅವರು ನಮಗೆ ಈ ರೀತಿಯ ವಿಶ್ವಾಸಘಾತುಕ ಕೆಲಸ ಮಾಡಿದರು ಎಂದು ಹೇಳಿದರು. ಬಿ.ಜೆ.ಪಿ. ಯವರು ಕೋರ್ಟಿಗೆ ಹೇಳಿದರು, ಇಲ್ಲ, ನಾವು ಅಧಿಕಾರ ಚಲಾಯಿಸಿ, ಯಾವ ರೀತಿಯಿಂದಲೂ ಗಲಭೆಯಾಗದಂತೆ ಮತ್ತು ಯಾವ ರೀತಿಯಿಂದಲೂ ಬಾಬರಿ ಮಸೀದಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆಂದು ಹೇಳಿದರು. ಮತ್ತೆ ಇನ್ನೊಂದು ಏನು ಹೇಳಿದ್ದಾರೆಂದರೆ, ಬಿ.ಜೆ.ಪಿ., ಆರ್.ಎಸ್.ಎಸ್. ವಿ.ಹೆಚ್.ಪಿ. ಮತ್ತು ಬಜರಂಗದಳ–ಇವೆಲ್ಲಾ ಆರ್ಗನೈಸೇಷನ್‌ನವರು ಬಹುಶಃ ವಿಶ್ವಾಸಘಾತುಕ ಕೆಲಸ ಮಾಡಿದ್ದಾರೆ ಎನ್ನುವಂತ ವಿಚಾರವನ್ನೂ ಹೇಳಿದರು. ಮತ್ತೆ ಎರಡನೇ ವಿಚಾರ ಏನು ಹೇಳಿದ್ದಾರೆಂದರೆ, it is a pre–planned ಎಂದರೆ, ಆಕ್ಷನ್ ಎಂದು ಹೇಳಿದ್ದಾರೆ. ಇವೆರಡೂ ಮುಖ್ಯ. ಅವರು ಇನ್ನೂ ಅನೇಕ ಮಾತುಗಳನ್ನು ಹೇಳಿದ್ದಾರೆ, ಅವೆಲ್ಲವುಗಳ ಬಗ್ಗೆ ನಾನು ಹೇಳುವುದಿಲ್ಲ. ಉತ್ತರಪ್ರದೇಶದಲ್ಲಿ ಬಿ.ಜೆ.ಪಿ. ಸರ್ಕಾರ ಇತ್ತು. ಅವರು ಕೇಂದ್ರ ಸರ್ಕಾರಕ್ಕೆ we will protect the mosque ಎಂದು ಹೇಳಿದರು. ಮತ್ತು ಕೋರ್ಟಿಗೆ ಹೋದರು. ಅಲ್ಲಿ we will protect the mosque ಎಂದು ಹೇಳಿದರು. ಆದರೆ ಆಯಿತೇನು ? They failed in protecting the mosque.

ಬಾಬರಿ ಮಸೀದಿ ನೆಲಸಮವಾಗಿದೆ. ಇವತ್ತಿನ ದಿವಸ ಅಲ್ಲ ಮೂರ್ತಿ ಕೂಡಿಸಿದ್ದಾರೆ, ಮೂರ್ತಿಯ ದರ್ಶನಕ್ಕೆ ಅವಕಾಶವಾಗಬೇಕೆಂದು ಕೇಳಿರುವುದೆನ್ನು ಇವತ್ತಿನ ಪೇಪರಿನಲ್ಲಿ ನಾನು ನೋಡಿದೆ. ನಾನು ಹೇಳುವುದು ಏನೆಂದರೆ, ಅಲ್ಲಿ ಎರಡೂವರೆ ಲಕ್ಷ ಜನ ಕರಸೇವಕರು ಸೇರಿದ್ದರು. ಎರಡೂವರೆ ಲಕ್ಷ ಜನ ಏಕೆ ಸೇರಿದರು ? ಬಿ.ಜೆ.ಪಿ.ಯವರು ಏನು ಹೇಳಿದರು ಎಂದರೆ ಅವರು ಅಲ್ಲಿ ಸೇರಿದ್ದಾರೆ, ಭಜನೆ ಮಾಡುತ್ತಾರೆ ಮತ್ತೆ ತಮ್ಮ ಊರಿಗೆ ಹೋಗುತ್ತಾರೆ ಎಂದು ಹೇಳಿದರು. ನನಗನ್ನಿಸುತ್ತದೆ

ಇದನ್ನು ಯಾರಾದರೂ ಬುದ್ಧಿ ಇಲ್ಲದವರು ಒಪ್ಪಬಹುದೇ ಹೊರತು ಬುದ್ಧಿ ಇರುವವರು ಒಪ್ಪುವಹಾಗಿಲ್ಲ. ನಾನು ಆಗ ಗುಲ್ಬರ್ಗಾದಲ್ಲಿದ್ದೆ. ಆಗ ಅನೇಕ ಜನ ಸ್ನೇಹಿತರು ಬಂದು ನನ್ನನ್ನು ಕೇಳುತ್ತಿದ್ದರು. ಅಲ್ಲಿ, ಅವರು ಬರೀ ಪೂಜೆ ಮಾಡುವುದಕ್ಕೆ ಮತ್ತು ಭಜನೆ ಮಾಡುವುದಕ್ಕೆ ಎರಡೂವರೆ ಲಕ್ಷ ಜನ ಸೇರಿದ್ದಾರೋ ಅಥವಾ ಅವರ ಉದ್ದೇಶ ಬೇರೆ ಇದೆಯೋ ಎಂದು ಕೇಳಿದರು. ಇದರ ಉದ್ದೇಶ ಏನು ಎನ್ನುವುದು ನಿಮಗೆ 6ನೇ ತಾರೀಖು ಆದ ಮೇಲೆ ಗೊತ್ತಾಗುತ್ತದೆ ಎಂದು ನಾನು ಹೇಳಿದೆ. ಗುಲ್ಬರ್ಗಾದಲ್ಲಿ ಇದ್ದ ನನಗೆ ಗೊತ್ತು ಇದರ ಉದ್ದೇಶ ಏನು ಏನ್ನುವುದು; ಕೇಂದ್ರ ಸರ್ಕಾರಕ್ಕೆ ಅವರು ಏಕೆ ಸೇರಿದ್ದಾರೆ ಎನ್ನುವುದು ಗೊತ್ತಾಗಲಿಲ್ಲವೇ ? ಎರಡೂವರೆ ಲಕ್ಷ ಜನರನ್ನು ಯಾರಾದರೂ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ,ಇದನ್ನು ವಿಚಾರ ಮಾಡಿ, ಯಾರೂ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿಲ್ಲ. ಬಿ.ಜೆ.ಪಿ.ಯವರು ಬಂದರೂ ಕೂಡ ಎರಡೂವರೆ ಲಕ್ಷ ಜನರನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿಲ್ಲ. ಎರಡೂವರೆ ಲಕ್ಷ ಜನರು ಸೇರಿದ್ದಾರೆಂದು ಪೇಪರಿನಲ್ಲಿ ಬರೆದಿದ್ದಾರೆ. ಈ ವಿಚಾರವನ್ನು ನಾನೇ ಹೇಳುತ್ತಾ ಇಲ್ಲ.

ಎರಡೂವರೆ ಲಕ್ಷ ಜನರನ್ನು ಯಾವ ರೀತಿಯಿಂದ ಕಂಟ್ರೋಲ್ ಮಾಡುವುದು ಸಾಧ್ಯ ಇತ್ತು ಎಂಬುದನ್ನು ವಿಚಾರ ಮಾಡಬೇಕು. ಮಾನ್ಯ ವಾಜಪೇಯಿಯವರು, ನಾನು ನೋಡಿದೆ, ಅದ್ವಾನಿಯವರು ಕಣ್ಣಿನಲ್ಲಿ ನೀರು ಸುರಿಸುತ್ತಿದ್ದರು ಎಂದು ಹೇಳಿದರು. ಬಾಬರಿ ಮಸೀದಿ ನೆಲಸಮ ಆದ ಮೇಲೆ ಅತ್ತರೇನು, ಕರೆದರೇನು, ಏನು ಮಾಡಿದರೇನು ? ನಮ್ಮ ಸೆಕ್ಯುಲರ್ ಸಿಸ್ಟಮ್‌ಗೆ ಧಕ್ಕೆ ಬಂದಾಗ ಏನಾದರೂ ಹೇಳಬಹುದು. We failed in our attempt, we have failed in protecting the Mosque – ಎಂದು ಆ ನಂತರ ಹೇಳಿದರೆ ಏನು ಲಾಭ ? ಅಲ್ಲಿ ಎರಡೂವರೆ ಲಕ್ಷ ಜನ ಸೇರುವ ಮುಂಚೆ ಕೇಂದ್ರ ಸರ್ಕಾರ ಏನು ಮಾಡುತ್ತಿತ್ತು ? ನಾನು ಒಪ್ಪುತ್ತೇನೆ, ರಾಜ್ಯಸರಕಾರ ಇದ್ದಾಗ ಕೇಂದ್ರ ಸರ್ಕಾರ ಏನೂ ಮಾಡುವುದಕ್ಕೆ ಆಗುವುದಿಲ್ಲ. ಕೇಂದ್ರ ಸರ್ಕಾರ ತಮ್ಮ ಮಿಲಿಟರಿ ಕಳುಹಿಸಬಹುದು. ಆದರೆ ರಾಜ್ಯ ಸರ್ಕಾರ 'ಯೆಸ್' ಎಂದಾಗ ಕೇಂದ್ರ ಸರಕಾರದ ಮಿಲಿಟರಿ ಕೆಲಸ ಮಾಡಬಹುದೇ ಹೊರತು ಇಲ್ಲದೇ ಹೋದರೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ನಾನು ಹೇಳುವುದು ಏನೆಂದರೆ, ನಮ್ಮ ಪಕ್ಷದ ಸರಕಾರ ಇತ್ತು, ವಿಶ್ವಾಸ ಮಾಡಿದೆವು ಎಂದರೆ ಒಪ್ಪುತ್ತೇನೆ, ಆದರೆ ನಾವು ಎರಡನೇ ಪಾರ್ಟಿಯನ್ನು ವಿಶ್ವಾಸ ಮಾಡುತ್ತೇವೆ ಎಂದರೆ ಹೇಗೆ ಒಪ್ಪುವುದಕ್ಕೆ ಆಗುತ್ತದೆ ? ಇದನ್ನು ವಿಚಾರ ಮಾಡಬೇಕು. ಇದನ್ನು ನಮ್ಮ ದೇಶದ ಪ್ರಧಾನ ಮಂತ್ರಿಯವರು ಹೇಳಬೇಕು. ಇದರಿಂದ ನಮ್ಮ ದೇಶದಲ್ಲಿ ಲುಕ್ಸಾನು ಎಷ್ಟಾಗಿದೆ ಎಂದರೆ, ಸುಮಾರು 1200 ಜನ ಸತ್ತರು, ನಮ್ಮ ರಾಜ್ಯದಲ್ಲಿ ಸುಮಾರು 80 ಜನ ಸತ್ತರು, ಇಡೀ ದೇಶದ್ದು ತೆಗೆದುಕೊಂಡರೆ 1200 ಜನ ಸತ್ತರು. ಎಷ್ಟೋ ಸಾವಿರ ಜನ ಝಕ್ಕಿ ಆದರು. ಎಷ್ಟೋ ಜನರ ಮನೆಗಳು ನಾಶವಾದವು. ಅದರ ಅಂದಾಜನ್ನು ಇನ್ನೂ ಮಾಡುತ್ತಾ ಇದ್ದಾರೆ. ಪ್ರಾಪರ್ಟಿ ಲಾಸ್ ಎಷ್ಟಾಗಿದೆ ಎಂದು ಇನ್ನೂ ಸರಿಯಾಗಿ ಗೊತ್ತಿಲ್ಲ. ನಮ್ಮ ರಾಜ್ಯದಲ್ಲೇ ಎರಡು ಕೋಟಿ, 5 ಕೋಟಿ, ಏಳೂವರೆ ಕೋಟಿ ಎಂದು ಹೇಳುತ್ತಾರೆ. ಇಡೀ ದೇಶದಲ್ಲಿ ಲೆಕ್ಕ ಹಾಕಿದರೆ ಎಷ್ಟಾಗುತ್ತದೆ ಎಂದು ನನಗೆ ಗೊತ್ತಾಗುತ್ತಿಲ್ಲ , ಎಷ್ಟು ಲಾಸ್ ಆಗಿದೆ ಎಂಬುದು ಗೊತ್ತಾಗುತ್ತಿಲ್ಲ. ಪ್ರಾಪರ್ಟಿ ಲಾಸ್ ಎಷ್ಟು ಆಗಿದೆ, ಇಂಡಸ್ಟ್ರಿಯಲ್ ಪ್ರೊಡಕ್ಷನ್ ಲಾಸ್ ಎಷ್ಟು ಆಗಿದೆ ಎನ್ನುವುದನ್ನು ನಾವು ವಿಚಾರ ಮಾಡಬೇಕು. ದಿನಾ ಬೆಳಗ್ಗೆ ಸಾಯಂಕಾಲ ಗಲಾಟೆ ಆಗುತ್ತಿದ್ದರೆ ಇಂಡಸ್ಟ್ರೀಸ್ ಹೇಗೆ ವರ್ಕ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ದೇಶದಲ್ಲಿ ಇಂಡಸ್ಟ್ರಿಯಲ್ ಪ್ರೊಡಕ್ಷನ್ ಲಾಸ್ ಒಂದು ಸಾವಿರ ಕೋಟಿ ಮೇಲೆ ಆಗಿದೆ ಎಂದು ಹೇಳಿದ್ದಾರೆ. ನಮ್ಮದು ಬಡ ದೇಶ. 1200 ಜನ ಸತ್ತರು, ಅನೇಕ ಸಾವಿರ ಜನ ಝಕ್ಕಿ ಆದರು, ಅನೇಕರ ಆಸ್ತಿಪಾಸ್ತಿ ನಷ್ಟವಾಯಿತು, ಹಾಳಾಗಿ ಹೋಯಿತು, ಇಂಡಸ್ಟ್ರಿಯಲ್ ಪ್ರೊಡಕ್ಷನ್ ಎಷ್ಟು ಕಡಿಮೆ ಆಯಿತು, ಇದಕ್ಕೆ ಯಾರು ಜವಾಬ್ದಾರರು ಎಂದು ನಾನು ಕೇಳುತ್ತಿದ್ದೇನೆ.

ಇದಕ್ಕೆ ಜವಾಬ್ದಾರರು ಯಾರು ಎಂದು ನಾನು ಒಬ್ಬ ನಾಗರೀಕನಾಗಿ ಕೇಳುತ್ತಾ ಇದ್ದೇನೆ. ಬಿ.ಜೆ.ಪಿ ಮೇಲೆ ವಿಶ್ವಾಸ ಮಾಡಿ ಎಂದು ಯಾರು ಹೇಳಿದ್ದರು ? ಏನು ನಿಮ್ಮ ಪಾರ್ಟಿಯವರು ಹೇಳಿದ್ದರೆ ? ಕ್ಯಾಬಿನೆಟ್ ಹೇಳಿತ್ತೆ ? ಈಗ ಅದರ ಪರಿಣಾಮ ಏನಾಗಿದೆ ? ಇದನ್ನು ಯಾರು ಹೋಗಲಾಡಿಸುತ್ತಾರೆ ? ಬಿ.ಜೆ.ಪಿ.ಯವರು ನಾವು ಪ್ರಾಯಶ್ಚಿತ್ತ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. ಏನು ಪ್ರಾಯಶ್ಚಿತ್ತ ಎಂದರೆ, ಉತ್ತರಪ್ರದೇಶ ಬಹಳ ದೊಡ್ಡ ರಾಜ್ಯ, ಇದರ ಆಡಳಿತವನ್ನು ನಾವು ಬಿಟ್ಟುಕೊಟ್ಟಿದ್ದೇವೆ, ನಾವು ರಾಜೀನಾಮೆ ಕೊಟ್ಟಿದ್ದೇವೆ, ಮೂರು ರಾಜ್ಯಗಳಲ್ಲಿ ಬಿ.ಜೆ.ಪಿ. ಗೌರ್ನಮೆಂಟ್ ಇತ್ತು, ಮೂರೂ ರಾಜ್ಯದಲ್ಲಿ ಅದು ಹೋಯಿತು ಮತ್ತು ಅದ್ವಾನಿಯವರು ಲೀಡರ್ ಆಫ್ ದಿ ಆಪೊಸಿಷನ್ ಆಗಿದ್ದರು, ಅವರು ರಾಜೀನಾಮೆ ಕೊಟ್ಟಿದ್ದಾರೆ, ನಾವು ಪ್ರಾಯಶ್ಚಿತ್ತ ಮಾಡಿಕೊಂಡಿದ್ದೇವೆ. We failed in our attempt to protect the Mosque. ನೀವು ಏನು ಮಾಡಿದ್ದೀರಿ ಎಂದು ಆ ಜನ ಕೇಳುತ್ತಾರೆ. ಜನಸಾಮಾನ್ಯರು ಈಗ ಕೇಳುವುದಿಲ್ಲ, ನಾಳೆ ಎಲೆಕ್ಷನ್ ಬಂದಾಗ ಕೇಳುತ್ತಾರೆ. ಆಗ ಏನು ಹೇಳುತ್ತೀರಿ ? ನೀವು ಏನು ಪ್ರಾಯಶ್ಚಿತ್ತ ಮಾಡಿಕೊಂಡಿರಿ. ನೀವು ಏನೂ ತಪ್ಪು ಮಾಡಿಲ್ಲವೋ ಎಂದು ಕೇಳುತ್ತಾರೆ. ನಾವು ಏನೂ ತಪ್ಪು ಮಾಡಿಲ್ಲ ಎಂದರೆ ಆ ಮಾತು ಬೇರೆ, ನಾವು ತಪ್ಪು ಮಾಡಿದ್ದೇವೆ. ನಿಮಗೆ ಬಿ.ಜೆ.ಪಿ. ಮೇಲೆ ವಿಶ್ವಾಸ ಮಾಡಿ ಎಂದು ಹೇಳಿದವರು ಯಾರು ? ಉತ್ತರಪ್ರದೇಶದಲ್ಲಿ ಬಿ.ಜೆ.ಪಿ. ಸರಕಾರ ಇತ್ತು. ಅದಕ್ಕಾಗಿ ನೀವು ಎಲ್ಲಾ ಸ್ಪಡಿ ಮಾಡಿಕೊಂಡು, ಪ್ರೆಸಿಡೆಂಟ್ ರೂಲ್ ತಂದು, ತಯಾರಿ ಮಾಡಿಕೊಡು ಇರಬೇಕಾಗಿತ್ತು. ನಿಮಗೆ ಹೇಳಬೇಕಾದರೆ, ಹೆಚ್ಚು ಹೊತ್ತು ಹಿಡಿಯುವ ಹಾಗಿಲ್ಲ. ಅರ್ಧ ಗಂಟೆಯೊಳಗೆ ಮಾಡಬಹುದಾಗಿತ್ತು ಮತ್ತು ಮಸೀದಿಯನ್ನು ಉಳಿಸಬಹುದಾಗಿತ್ತು, ಆದರೆ ಮಾಡಲಿಲ್ಲ. ಈಗ ಮಸೀದಿಯನ್ನು ಪೂರ್ಣ ನೆಲಸಮ ಮಾಡಿದರು. ಇದು ಫ್ರೀಪ್ಲಾನ್ಡ್ ಎಂದು ಹೇಳಿದರು. ಇದು ಎಲ್ಲರಿಗೂ ಗೊತ್ತಿತ್ತು. ಬಹುಶಃ ಜಗತ್ತಿನ ಎಲ್ಲರಿಗೂ ಇದು ಗೊತ್ತಿತ್ತು, ಆದರೆ ಕೇಂದ್ರ ಸರಕಾರಕ್ಕೆ ಒಂದಕ್ಕೆ ಮಾತ್ರ ಫ್ರೀಪ್ಲಾನ್ಡ್ ಎನ್ನುವುದು ಗೊತ್ತಿರಲಿಲ್ಲ ಎಂದರೆ ಹೇಗೆ ಒಪ್ಪುವುದಕ್ಕೆ ಆಗುತ್ತದೆ. ಇದನ್ನು ಹೇಗೆ ಜನರಿಗೆ ಹೇಳಬೇಕು ಎಂದು ನಾನು ಕೇಂದ್ರ ಸರ್ಕಾರಕ್ಕೆ ಕೇಳುತ್ತಿದ್ದೇನೆ.

ಇದು ಫ್ರೀಪ್ಲಾನ್ಡ್ ಇದ್ದರೆ ನಿಮ್ಮ ಸಿ.ಬಿ.ಐ. ಏನು ಮಾಡುತ್ತಿದ್ದರು ? ನಿಮ್ಮ ರಾ ಏನು ಮಾಡುತ್ತಿದ್ದರು ? ನಿಮ್ಮ ಗೌರ್ನರ್ ಏನು ಮಾಡುತ್ತಿದ್ದರು ? ನಿಮ್ಮ ಎರಡನೇ ಇಂಟಲಿಜನ್ಸಿ ಏನು ಮಾಡುತ್ತಿದ್ದರು ? ಅವರು ಅವರ ಹಿಂದೆ ಇದ್ದರೇ ? ಅವರು ನಿಮಗೆ ಏನನ್ನೂ ಹೇಳಲಿಲ್ಲವೇ ? ಈ ರೀತಿಯಿಂದ ಜನರಿಗೆ ಶಿಕ್ಷೆಯಾಯಿತು ? ಇದು ಏನೆಂಬುದು ನಮಗೆ ಗೊತ್ತಾಗಲಿಲ್ಲ ಎಂದು ಅದನ್ನಾದರೂ ಹೇಳಿ. ಇಲ್ಲಾ ನಮಗೇ ಏನೂ ಗೊತ್ತಾಗಲಿಲ್ಲ, ನಾವು ಕಣ್ಣು ಮುಚ್ಚಿ ಬಿ.ಜೆ.ಪಿ.ಯವರ ಮೇಲೆ ವಿಶ್ವಾಸ ಮಾಡಿದೆವು. ಆದ್ದರಿಂದ ಈ ಪರಿಣಾಮ ಆಯಿತು ಎಂದು ಹೇಳಿದರೆ ಆಗ ನಾವು ಏನಾದರೂ ಅದರ ಬಗ್ಗೆ ವಿಚಾರ ಮಾಡಬಹುದು. ಆದರೆ ಜಗತ್ತಿನ ಎಲ್ಲರ ಪರಿಸ್ಥಿತಿ ಕೇಂದ್ರ ಸರ್ಕಾರಕ್ಕೆ ಗೊತ್ತಿದೆ. ಇದು ಫ್ರೀಪ್ಲಾನ್ಡ್ ಎಂದು ಯಾವಾಗ ಹೇಳುತ್ತಾರೆ ಎಂದರೆ ಇದನ್ನು ಡಿಸೆಂಬರ್ 6ನೇ ತಾರೀಖು ಆದ ಮೇಲೆ ಹೇಳುತ್ತಾರೆ. ಶ್ರೀ ಎಲ್.ಕೆ. ಅದ್ವಾನಿಯವರು ಒಂದು ಆರ್ಟಿಕಲ್ ಬರೆದಿದ್ದರು. ನಾನು ಪೂರಾ ಆರ್ಟಿಕಲ್ ಓದಿದ್ದೇನೆ. ಯಾವುದೋ ಒಂದು ಪೇಪರ್‌ನಲ್ಲಿ ಅವರ ಆರ್ಟಿಕಲ್ ಕೊಟ್ಟಿದ್ದರು, ಅದನ್ನು ನಾನು ಓದಿದ್ದೇನೆ. ಅದರಲ್ಲಿ ಅವರು ಹೇಳಿದ್ದಾರೆ. ಅವರು ಡಿಸೆಂಬರ್ 6ರಿಂದ ಕರಸೇವಕರು ಕೆಲಸ ಮಾಡಿದ್ದಾರೆ. ಡಿಸೆಂಬರ್ 7ನೇ ತಾರೀಖು ಕೆಲಸ ಮಾಡಿದ್ದಾರೆ, 8ನೇ ತಾರೀಖು ಕೆಲಸ ಮಾಡಿದ್ದಾರೆ, ಅವರು 3ದಿವಸ ಕೆಲಸ ಮಾಡಿದ್ದಾರೆಂದು ಹೇಳಿದ್ದಾರೆ. ಅಂದರೆ ಕೇಂದ್ರ ಸರ್ಕಾರ ಆ 3 ದಿವಸಗಳ ತನಕ ಏಕೆ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದ್ದರು. ಅಲ್ಲಿ ಅವರು ಏನು ಮಾಡಿದರು ಎಂದರೆ, ಒಂದನೆಯದು ಬಾಬರಿ ಮಸೀದಿಯನ್ನು ನೆಲಸಮ ಮಾಡಿದರು. ಎರಡನೆಯದಾಗಿ ಅಲ್ಲಿ ಒಂದು ಪ್ಲಾಟ್‌ಫಾರಂ ಮಾಡಿ ಮೂರ್ತಿಯನ್ನು ಕೂರಿಸಿದರು. ಮೂರನೆಯದು

ಆ ಮೂರ್ತಿಯ ತನಕ ಹೋಗುವುದಕ್ಕೆ ಜಾಗ ಮಾಡಿದರು. ಇಷ್ಟು ಕೆಲಸವನ್ನು 6 ಗಂಟೆಯಲ್ಲಿ ಮಾಡುವಂತಹ ಕೆಲಸವೇ? ಇದನ್ನು ಮಾಡಲು 6 ಗಂಟೆಗಿಂತ ಹೆಚ್ಚು ಸಮಯ ಬೇಕು. ಅಲ್ಲಿಯವರೆಗೂ ಇವರು ಏನು ಮಾಡುತ್ತಿದ್ದರು? ಕೇಂದ್ರ ಸರ್ಕಾರದ ಮಿಲ್ಟ್ರಿ ಏನು ಮಾಡುತ್ತಿತ್ತು? ಕೇಂದ್ರ ಸರ್ಕಾರದ ಸಿ.ಆರ್.ಪಿ. ಯವರು ಏನು ಮಾಡುತ್ತಿದ್ದರು? ಕೇಂದ್ರ ಸರ್ಕಾರದ ಉಳಿಕೆ ಆರ್ಗನೈಜೇಶನ್ಸ್ ಏನು ಮಾಡುತ್ತಿದ್ದರು? ಏನು ನೋಡುತ್ತಿದ್ದರಾ? ಇಲ್ಲಾ ಇವರು ಅವರ ಜೊತೆಯಲ್ಲಿ ಸೇರಿಕೊಂಡು ಏನು ಭಜನೆ ಮಾಡಿಕೊಂಡು ಕುಳಿತುಕೊಂಡಿದ್ದರೋ? ಏಕೆ ಆಕ್ಷನ್ ತೆಗೆದುಕೊಂಡಿಲ್ಲ? ಎನ್ನುವಂತಹ ಪ್ರಶ್ನೆಗೆ ನಾಳೆ ಜನಸಾಮಾನ್ಯರಲ್ಲಿ ಹೇಳಬೇಕಾಗುತ್ತದೆಯೇ ಹೊರತಾಗಿ ಮತ್ತೆ ನಮ್ಮಷ್ಟಕ್ಕೆ ನಾವು ವಿಚಾರ ಮಾಡುವ ಪ್ರಶ್ನೆ ಅಲ್ಲ. ನಮ್ಮಲ್ಲಿ ನನಗೆ ಬೇಕಾದಂತಹ ಕೆಲವು ಎಂ.ಎಲ್.ಎ.ಗಳಿಗೆ ನಾನು ಹೇಳಿದೆ. ನೋಡ್ರಿ ಈ ಒಂದು ಬಾಬರಿ ಮಸೀದಿ ಕೇಸಾಗಿ ನಾವು ಬಹಳ ಕಷ್ಟದಲ್ಲಿ ಬಿದ್ದಿದ್ದೇವೆ, ನಾವು ಅಂದರೆ ನಮ್ಮ ಪಕ್ಷ ಬಹಳ ಕಷ್ಟದಲ್ಲಿ ಬಂದಿದೆ ಎಂದರೆ ಅದಕ್ಕೆ ಅವರು ಏನು ಹೇಳುತ್ತಾರೆ ಗೊತ್ತಾ ಇಲ್ರಿ "public memory is very short; don't worry about the next election" ಎಂದು. ಹೌದು, public memory is short ಇರಬಹುದು, but what about the memory of the opposition party? ಆಪೋಜಿಷನ್ ಪಾರ್ಟಿಯವರು ಹೇಳುತ್ತಾರೆ. ನೋಡ್ರಿ ಉತ್ತರಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಹಿಮಾಚಲಪ್ರದೇಶ್, ಬಿಹಾರ್ ಇದೆ. ಉತ್ತರ ಪ್ರದೇಶದಲ್ಲಿ 85 ಜನಕ್ಕೆ 5 ಜನ ಮಾತ್ರ ಪಾರ್ಲಿಮೆಂಟಿಗೆ ಆರಿಸಿ ಬಂದಿದ್ದಾರೆ. ನಿಮಗೆ ಹೇಳಬೇಕಾದರೆ, ಬಿಹಾರ್‌ನಿಂದ 54 ಜನರ ಪೈಕಿ ಒಬ್ಬರು ಆರಿಸಿ ಬಂದಿದ್ದಾರೆ. ಅದೇ ರೀತಿಯಾಗಿ ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಬಿಜೆಪಿ ಸರ್ಕಾರ ಮೊನ್ನೆ ಮೊನ್ನೆವರೆಗೂ ಇತ್ತು. ಇದಕ್ಕೆ ಯಾರು ಜವಾಬ್ದಾರರು? ನಾವು ಜವಾಬ್ದಾರರೇ? ಕರ್ನಾಟಕದ ಜನರು ಜವಾಬ್ದಾರರೇ? ಅಯೋಧ್ಯೆಯಲ್ಲಿ ಏನೋ ಆಯಿತು, ಆದರೆ ಸತ್ತವರೆಲ್ಲ ಇಡೀ ಹಿಂದೂಸ್ತಾನದಲ್ಲಿದ್ದ ಜನರು ಸತ್ತರು. ಇಡೀ ಹಿಂದೂಸ್ತಾನದಲ್ಲಿ ಒಟ್ಟು 1200 ಜನರು ಸತ್ತರು. ಎರಡನೇ ರಾಜ್ಯದ ಜನರು ಸತ್ತರೆ, ಅದರಲ್ಲಿ ಅಯೋಧ್ಯ ಜನರೂ ಸತ್ತರೇ? ಇನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಅದಕ್ಕಾಗಿ public memory is short ಅಂದರೆ ಅರ್ಥ ಇಲ್ಲ. ಏಕೆಂದರೆ, ಪಬ್ಲಿಕ್ ಮೆಮೋರಿ ಶಾರ್ಟ್ ಅಥವಾ ಲಾಂಗ್ ಇದೆಯೋ ಅದು ಬೇರೆ ಮಾತು. ನಿಮಗೆ ಹೇಳಬೇಕಾದರೆ, ಡಿಸೆಂಬರ್ 89 ರಲ್ಲಿ ಪಬ್ಲಿಕ್ ಮೆಮೋರಿ ಶಾರ್ಟ್ ಎಂದು ನನಗೆ ಗೊತ್ತಿರಲಿಲ್ಲ. ನಾನು ಹೋದ ಕಡೆಯೆಲ್ಲಾ ಜನತಾ ದಳ ಮತ್ತು ಜನತಾ ಪಾರ್ಟಿ ಎಲೆಕ್ಷನ್ ಮ್ಯಾನಿಫೆಸ್ಟೋ ಇಟ್ಟುಕೊಂಡು ಹೋಗುತ್ತಿದ್ದೆ. ನಮ್ಮ ಬಗ್ಗೆ ನಾನು ಏನನ್ನೂ ಹೇಳುತ್ತಿರಲಿಲ್ಲ. ನಮ್ಮ ಪಾರ್ಟಿ ಬಗ್ಗೆ ನಾನು ಹೇಳುತ್ತಿರಲಿಲ್ಲ. ಯಾವಾಗಲೂ ಜನತಾ ಪಾರ್ಟಿ ಬಗ್ಗೆ ಮತ್ತು ಜನತಾ ದಳದ ಬಗ್ಗೆ ನಾನು ಪಬ್ಲಿಕ್ ಮೀಟಿಂಗ್‌ನಲ್ಲಿ ಹೇಳುತ್ತಿದ್ದೆ. ನೋಡ್ರಿ ಅವರು ನಿಮಗೆ ಈ ರೀತಿಯಿಂದ ಹೇಳಿ ಮೋಸಮಾಡಿದ್ದಾರೆ ಎಂದು ಹೇಳುತ್ತಿದ್ದೆ. ಅದೇ ರೀತಿಯಾಗಿ ನಾಳೆ ಒಂದು ವೇಳೆ ಜನರು ಕೇಳಿದರೆ ಆಗ ನಾವು ಏನು ಹೇಳಬೇಕು. ಅದಕ್ಕೆ ಕೇಂದ್ರ ಸರ್ಕಾರದ ನಮ್ಮ ನಾಯಕರು ನಮಗೆ ಮಾರ್ಗದರ್ಶನ ಮಾಡಬೇಕೇ ಹೊರತಾಗಿ ನಾವು ನಮ್ಮ ಮಾರ್ಗದರ್ಶನ ಮಾಡಿಕೊಳ್ಳುವ ಪರಿಸ್ಥಿತಿ ಇಲ್ಲ. ಅದಕ್ಕೆ ಈ ವಿಚಾರಗಳನ್ನು ನಾನು ತಮ್ಮ ಮುಂದೆ ಹೇಳುತ್ತಿದ್ದೇನೆ.

ಈಗ ನಾವೆಲ್ಲರೂ ವಿಚಾರ ಮಾಡಬೇಕು. ಯಾವುದೇ ಪಾರ್ಟಿಯವರು ಇರಲಿ, Respect for law, respect for authority ಕಡಿಮೆಯಾಗುತ್ತಿದೆ. ಎನ್ನುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ನಾವು ವಿಚಾರ ಮಾಡುವುದಕ್ಕೆ ಹೋದರೆ ಹಿಂದೂಸ್ತಾನದ ನಾಗರೀಕರಾಗಿ ನಮ್ಮ ಕರ್ತವ್ಯ ಚ್ಯುತಿಯಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. Respect for authroity, respect for law ಏಕೆ ಕಡಿಮೆಯಾಗುತ್ತಿದೆ? ನಿಮಗೆ ಹೇಳಬೇಕಾದರೆ ಈ ಶೆಡ್ಯೂಲ್ ಬ್ಯಾಂಕ್ಸ್ ಇವೆಲ್ಲಾ ಗವರ್ನಮೆಂಟ್ ಬ್ಯಾಂಕ್ಸ್. ಇವತ್ತು ಜನತೆಗೆ ಏನಾಗಿದೆ? ಬ್ಯಾಂಕ್ಸ್ ಮೇಲೆ ವಿಶ್ವಾಸ ಇಲ್ಲ. ಬ್ಯಾಂಕ್‌ನಲ್ಲಿ

ಡಿಪಾಜಿಟ್ ಇಟ್ಟರೆ ಬರುತ್ತದೋ ಹೋಗುತ್ತದೋ ಎನ್ನುವ ಪರಿಸ್ಥಿತಿ ಬಂದುಬಿಟ್ಟಿದೆ. ಇದು ಏಕೆ ಬಂತು ? ಇದು ಸರಿ ಹೋಗಲಿಕ್ಕೆ ಯಾರ ಜವಾಬ್ದಾರಿ ಇದೆ ? ಶೆಡ್ಯೂಲ್ಡ್ ಬ್ಯಾಂಕ್ಸ್ ನೋಡುವುದಕ್ಕೆ ರಿಸರ್ವ್ ಬ್ಯಾಂಕ್ ಇದೆ. ರಿಸರ್ವ್ ಬ್ಯಾಂಕ್ ನೋಡುವುದಕ್ಕೆ ಗೌರ್ನಮೆಂಟ್ ಆಫ್ ಇಂಡಿಯಾದಲ್ಲಿ ಬ್ಯಾಂಕಿಂಗ್ ಡಿಪಾರ್ಟ್‌ಮೆಂಟ್ ಇದೆ. ಇದಕ್ಕೆ ನಮ್ಮದೂ ಜವಾಬ್ದಾರಿ ಇದೆ, ಮಾರಲ್ ಅಥಾರಿಟಿ ಇತ್ತು. ನಾವು ಫೇಲ್ ಆಗಿದ್ದೇವೆಂದು ಯಾರಾದರೂ ಪ್ರಾಯಶ್ಚಿತ್ತ ಮಾಡಿಕೊಂಡಿದ್ದಾರೆಯೇ ? ಯಾರೂ ಪ್ರಾಯಶ್ಚಿತ್ತ ಮಾಡಿಕೊಂಡಿಲ್ಲ. ಈ ರೀತಿ ಪ್ರಾಯಶ್ಚಿತ್ತ ಮಾಡಿಕೊಳ್ಳದೆ ಈಗ 3 ಸಾವಿರ ಕೋಟಿ ಎನ್ನುತ್ತಾರೆ. 4 ಸಾವಿರ ಕೋಟಿ ಎನ್ನುತ್ತಾರೆ. 5 ಸಾವಿರ ಕೋಟಿ ಎನ್ನುತ್ತಾರೆ. ಎಷ್ಟು ಹೋಗಿದೆಯೋ ಗೊತ್ತಿಲ್ಲ, ದೇವರಿಗೇ ಗೊತ್ತು. ನಮ್ಮ ದುಡ್ಡು ಇನ್ನೂ ಎಷ್ಟು ಹೋಗಿದೆ ಎನ್ನುವುದು. ಜೆ.ಪಿ.ಸಿ. ರಿಪೋರ್ಟ್ ಬಂದಾಗ ಗೊತ್ತಾಗುತ್ತದೆ ಇದು ಯಾರ ದುಡ್ಡು ? ಇದು ದೇಶದ ದುಡ್ಡಲ್ಲವೇ ? ಇದು ಜನ ಸಾಮಾನ್ಯರ ದುಡ್ಡಲ್ಲವೇ ? ಇದಕ್ಕೆ ಯಾರೂ ಪ್ರಾಯಶ್ಚಿತ್ತ ಮಾಡಬೇಕಾದ ಅವಶ್ಯಕತೆ ಇಲ್ಲವೇ ? ರಿಸರ್ವ್ ಬ್ಯಾಂಕೂ ಪ್ರಾಯಶ್ಚಿತ್ತ ಮಾಡಲಿಕ್ಕೆ ತಯಾರಿಲ್ಲ. ಬ್ಯಾಂಕಿಂಗ್ ಡಿಪಾರ್ಟ್‌ಮೆಂಟೂ ಪ್ರಾಯಶ್ಚಿತ್ತ ಮಾಡಲಿಕೆ ತಯಾರಿಲ್ಲ. ಗೌರ್ನಮೆಂಟ್ ಆಫ್ ಇಂಡಿಯಾನೂ ಪ್ರಾಯಶ್ಚಿತ್ತ ಮಾಡಲಿಕ್ಕೆ ತಯಾರಿಲ್ಲ. ಇನ್ನು ಪ್ರಾಯಶ್ಚಿತ್ತ ಯಾರು ಮಾಡಬೇಕು ? ನಾವು ಎಲ್ಲಿಂದ ಎಲ್ಲಿಗೆ ಬಂದಿದ್ದೇವೆ ಎಂಬುದನ್ನು ನಿಮಗೆ ಉದಾಹರಣೆಗೆ ಹೇಳುತ್ತಿದ್ದೇನೆ. ತಮಿಳುನಾಡಿನಲ್ಲಿ ರೈಲ್ವೆ ಆಕ್ಸಿಡೆಂಟ್ ಆಯಿತು; ಆ ವೇಳೆಯಲ್ಲಿ ಶ್ರೀ ಲಾಲಾಬಹುದರ್ ಶಾಸ್ತ್ರಿಯವರು ರೈಲ್ವೆ ಮಿನಿಸ್ಟರಾಗಿದ್ದರು. ಆಗ ಅವರು ರೆಸಿಗ್‌ನೇಷನ್ ಕೊಟ್ಟರು. ಅವರು ಹೇಳಿದರು ಇದು ಮಾರಲ್ ರೆಸ್ಪಾನ್ಸಿಬಿಟಲಿಟಿ, ನಾನು ರೈಲ್ವೆ ಮಿನಿಸ್ಟರ್ ಆಗಿದ್ದಾಗ ರೈಲ್ವೆ ಆಕ್ಸಿಡೆಂಟ್ ಆಯಿತು ಆದ್ದರಿಂದ ನಾನು ರಾಜೀನಾಮೆ ಕೊಡುತ್ತೇನೆ ಎಂದು ರಾಜೀನಾಮೆ ಕೊಟ್ಟರು. ಇವತ್ತು ಯಾರಾದರು ರಾಜೀನಾಮೆ ಕೊಟ್ಟವರು ಇದ್ದಾರೆಯೇ ? ನಾನು ಕೇಳುತ್ತೇನೆ. ಇವತ್ತು ನಾವು ರಾಜೀನಾಮೆ ಕೊಡುವುದಕ್ಕೆ ತಯಾರಿದ್ದೇವೆ, ನಾವು ಎಲ್ಲಾ ಬಿಡಲಿಕ್ಕೆ ತಯಾರಿದ್ದೇವೆ. ಆದರೆ ಪೊಲಿಟಿಕಲ್ ಪವರ್ ಮಾತ್ರ ಬಿಡಲಿಕ್ಕೆ ನಾವು ತಯಾರಿಲ್ಲ. ಅಧಿಕಾರ ಹೋದರೂ ಪರವಾಗಿಲ್ಲ, ಆದರೆ ರಾಜಕೀಯ ಬಿಡಲಿಕ್ಕೆ ತಯಾರಿಲ್ಲ. ಇಂಥಾ ವಾತಾವರಣ ದೇಶದಲ್ಲಿ ಬೆಳೆಯಲಿಕ್ಕೆ ಯಾರು ಕಾರಣ ? ಜನ ಕಾರಣವೋ ? ಅಥವಾ ನಾವು ಕಾರಣವೋ ? ಅಥವಾ ರಾಜಕೀಯ ಪಕ್ಷ ಕಾರಣವೋ ? ಇದು ವಿಚಾರ ಮಾಡಬೇಕು. ಅವತ್ತು ಫಾರಿನ್ ಅಫೇರ್ಸ್ ಮಿನಿಸ್ಟರ್ ಮಾಧವರಾವ್ ಸೋಳಂಕಿಯವರಿಗೆ ಯಾರೋ ಲೆಟರ್‌ನ್ನು ಕೊಟ್ಟರಂತೆ. ಆ ಕಾಗದವನ್ನು ಸ್ವೀಡನ್ ಫಾರಿನ್ ಮಿನಿಸ್ಟರ್‌ಗೆ ಕೊಟ್ಟರು. ಯಾರು ಕೊಟ್ರಪ್ಪ ಕಾಗದ ಎಂದರೆ, ನನಗೆ ಗೊತ್ತಿಲ್ಲ, ಯಾರೋ ಕೊಟ್ರು ನಾನು ತೆಗೆದುಕೊಂಡು ಹೋಗಿ ಕೊಟ್ಟೆ ಎಂದು ಹೇಳಿದರು. As Government of India ನೀವು ಏನು ಮಾಡುತ್ತಿದ್ದಿರಿ ? ಇವತ್ತಿನವರೆಗೂ ಆ ಕಾಗದ ಯಾರು ಕೊಟ್ಟರು ಎಂದು ಗೊತ್ತಿಲ್ಲ. ಮಾಧವರಾವ್ ಸೋಳಂಕಿಯವರ ಕೈಗೆ ಕಾಗದ ಹೇಗೆ ಬಂತು ? ಆ ಕಾಗದ ಸ್ವೀಡನ್‌ಗೆ ಹ್ಯಾಗೆ ಹೋಯಿತು ? .....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಒಂದು ಮಿನಿಟ್; ಕ್ಷಮಿಸಬೇಕು. ಸನ್ಮಾನ್ಯ ಅಧ್ಯಕ್ಷಿಣಿಯವರೆ, ಅನೇಕ ವಿಷಯಗಳನ್ನು ಮಾನ್ಯ ಮಾಜಿ ಮುಖ್ಯ ಮಂತ್ರಿಗಳು ಮತ್ತು ಹಿರಿಯ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ನನಗೆ ತಿಳಿದ ಮಟ್ಟಿಗೆ, ನನ್ನ ಜ್ಞಾನ ಅನ್ನಿ ಅಥವಾ ನನ್ನ ತಿಳುವಳಿಕೆ ಕಡಿಮೆ ಇರಬಹುದು. ಅವರು ಇವತ್ತು ಪ್ರಸ್ತಾಪ ಮಾಡಿದಂಥ ಅನೇಕ ವಿಷಯಗಳು ಏನಿವೆ ಬಹುಶಃ ಅದಕ್ಕೆ ಪಾರ್ಲಿಮೆಂಟ್‌ನಲ್ಲಿ ಹೆಚ್ಚಿಗೆ ಉತ್ತರ ಸಿಗಬಹುದು.ಈ ಸದನದಲ್ಲಿ ನಾವು ಇವತ್ತು ತಂದಂಥ ಅಡ್ಜರ್ನ್‌ಮೆಂಟ್ ಮೋಷನ್ ಮತ್ತು ಅದಕ್ಕೆ ಸ್ಟೇಟ್‌ಮೆಂಟ್ ಏನು ಕೊಟ್ಟಿದ್ದಾರೆ ಸನ್ಮಾನ್ಯ ವೀರಪ್ಪಮೊಯಿಲಿಯವರು ಬಹುಶಃ ಅದರ ಮೇಲೆ ಚರ್ಚೆ ನಡೆದಿದೆ ಎಂದು ನಾನು ಭಾವಿಸಿದ್ದೇನೆ. ಅಂದರೆ ನಮ್ಮ ರಾಜ್ಯದಲ್ಲಿ 6ನೇ ತಾರೀಖಿನಿಂದ ಸತತವಾಗಿ 12 ಮತ್ತು 13 ರವರೆಗೆ ಏನು ಘಟನೆಗಳು

ನಡೆದವು ? ಯಾವ ರೀತಿಯಾಗಿ ಜನ ತೊಂದರೆಗೆ ಈಡಾದರು ? ಏನು ಲುಕ್ಸಾನಾಗಿದೆ ? ಯಾವ ರೀತಿಯಾಗಿ ಕಾರ್ಯಕ್ರಮ ಹಾಕಿಕೊಳ್ಳಬೇಕು ? ಯಾವ ರೀತಿಯಾಗಿ ಕಾಂಪನ್‌ಸೇಷನ್ ಕೊಡಬೇಕು ? ಯಾವ ರೀತಿಯಾಗಿ ಲಾ ಅಂಡ್ ಆರ್ಡರ್ ಮೇನ್‌ಟೇನ್ ಮಾಡಬೇಕು ಎನ್ನತಕ್ಕಂಥಾದ್ದರ ಮೇಲೆ ಹೆಚ್ಚು ಬೆಳಕನ್ನು ಚೆಲ್ಲುತ್ತಾರೆ ಮತ್ತು ಅದಕ್ಕೆ ಮುಂದೆ ಸಲಹೆ ಕೂಡ ಸಿಗುತ್ತವೆ ಎನ್ನತಕ್ಕಂಥ ದೃಷ್ಟಿಯಿಂದ ಮತ್ತು ಈ ಚರ್ಚೆ ಅದಕ್ಕೆ ಸೀಮಿತವಾಗಿದೆ ಎಂದು ನಾನು ತಿಳಿದುಕೊಂಡಿದ್ದು.....

ಶ್ರೀ ವಾಟಾಳ್ ನಾಗರಾಜ್ :– ಚರ್ಚೆ ಸೀಮಿತವಾಗಬಾರದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ನನ್ನ ಹೇಳಿಕೆ ಆದ ಮೇಲೆ ನೀವು ಉತ್ತರ ಕೊಡಿ.

5.35 ಪಿ.ಎಂ

ದಯಮಾಡಿ ನನ್ನ ಮಾತುಗಳು ಮುಗಿದ ಮೇಲೆ ನೀವು ಮಾತನಾಡಿ, ಅದಕ್ಕೆ ನಾನು ಉತ್ತರ ಕೊಡುತ್ತೇನೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಹಿರಿಯ ನಾಯಕರಾದ ವೀರೇಂದ್ರ ಪಾಟೀಲರು ತಮ್ಮ ಅನುಭವದ ಮೇಲೆ ಮಾತನಾಡುತ್ತಾ ಇದ್ದಾರೆ. ಅವರು ಒಬ್ಬ ಸ್ಟೇಟ್ಸ್‌ಮೆನ್ ಆಗಿ ಮಾತನಾಡುತ್ತಾ ಇದ್ದಾರೆ. I complemented him, I congratulated him .....

Sri M. Mallikarjuna Kharge: I have never denied that. ನೀವು ಅದನ್ನು ತಪ್ಪಾಗಿ ತಿಳಿದುಕೊಳ್ಳಬೇಡಿ. ನಿಮ್ಮ ಬಾಯಿಯಲ್ಲಿನ ಮಾತುಗಳನ್ನು ನನ್ನ ಬಾಯಲ್ಲಿ ಹಾಕಬೇಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಈ ಸದನದಲ್ಲಿ ಯಾರು ಏನು ಬೇಕಾದರೂ ಮಾತನಾಡಲು ಸ್ವಾತಂತ್ರ್ಯ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಹಿರಿಯರಾಗಿ, ಒಬ್ಬ ಸ್ಟೇಟ್ಸ್‌ಮನ್ ಆಗಿ ಅವರು ಮಾತನಾಡುತ್ತಾ ಇದ್ದಾರೆ. ಏನು ನಡೆಯಿತು, ಅಯೋಧ್ಯೆ ಘಟನೆಯ ನಂತರ ಇದಕ್ಕೆಲ್ಲ ಮೂಲಕಾರಣ ಏನು ಎಂಬುದನ್ನು ಅವರು ಹೇಳುತ್ತಾ ಇದ್ದಾರೆ. ಅವರಿಗೆ ಹೇಳುವ ಅಧಿಕಾರ ಇಲ್ಲವೇ ?

ಶ್ರೀ ವಾಟಾಳ್ ನಾಗರಾಜ್:– ಕೇಂದ್ರ ಸರ್ಕಾರದವರು ವಿಫಲವಾಗಿರತಕ್ಕಂಥ ದಿಶೆಯಲ್ಲಿ ಅಲ್ಲಿನ ಸಮಗ್ರ ವಿಚಾರವನ್ನು ಅವರು ಹೇಳುತ್ತಾ ಇದ್ದಾರೆ.

(ಗೊಂದಲ)

ಡಾ. ಜೀವರಾಜ ಆಳ್ವ:– ಒಂದು ರಾಷ್ಟ್ರೀಯ ದುರಂತ ನಡೆದಿದೆ. ಈ ರಾಷ್ಟ್ರೀಯ ದುರಂತ ನಡೆದ ಸಂದರ್ಭದಲ್ಲಿ ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳುತ್ತಾ ಇದ್ದೇವೆ. ಒಂದು ಪಕ್ಷದವರಾಗಿ, ಸದಸ್ಯರಾಗಿ, ಈ ರಾಷ್ಟ್ರದ ನಾಗರೀಕರಾಗಿ, ನಾವೆಲ್ಲರೂ ಏನು ತಪ್ಪು ಮಾಡಿದ್ದೇವೆ ಎಂಬುದನ್ನು. ಅದಕ್ಕೆ ಮುಖ್ಯಮಂತ್ರಿಯವರು ಮೊದಲು ಒಪ್ಪಿಗೆ ಕೊಟ್ಟಿದ್ದರು. ಇದನ್ನು ನಾವು ಏತಕ್ಕಾಗಿ ಅಡ್ಜರ್ನ್‌ಮೆಂಟ್ ಮೋಶನ್ ಆಗಿ ಇನ್ಸಿಸ್ಟ್ ಮಾಡಿಲ್ಲ ಅಂದರೆ ಒಂದು ಹೊಸ ಸಂಪ್ರದಾಯವನ್ನು ನಾವು ಹಾಕಿದ್ದೇವೆ. ಇದರ ಬಗ್ಗೆ ಅವರು ಮಾಡಿದ ಸ್ಟೇಟ್‌ಮೆಂಟನ್ನು ನಾವು ಕೇಳಿದ್ದೇವೆ. ಇದರ ಬಗ್ಗೆ ಮುಕ್ತ ಚರ್ಚೆಯಾಗಬೇಕು. ನಮ್ಮ ವೈಫಲ್ಯತೆಗಳೇನು ? ನಾವು ಮಾಡಿರುವ ದುರಂತ ಏನು ?

ರಾಜಕೀಯ ಪಕ್ಷಗಳಾಗಿ ಏನು ಮಾಡಿದ್ದೇವೆ, ರಾಷ್ಟ್ರೀಯ ನಾಯಕರಾಗಿ, ನಾವು ಏನು ಮಾಡಿದ್ದೇವೆ ಎನ್ನುವುದರ ವಿಶ್ಲೇಷಣೆ ನಡೆಯಬೇಕು ಎನ್ನುವುದರ ಬಗ್ಗೆ ಮುಖ್ಯಮಂತ್ರಿಗಳು ಒಪ್ಪಿಗೆ ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ವೀರೇಂದ್ರ ಪಾಟೀಲರು ಹಿರಿಯ ಸದಸ್ಯರು, ಅವರಿಗೆ ನಾವು ಅಡ್ಡ ಬರುವುದು ಬೇಡ.

ಛೇರ್ಮನ್:– ಅವರು ಮಾತನಾಡಿ ಮುಗಿಸಲಿ. ನಿಮಗೆಲ್ಲರಿಗೂ ಅವಕಾಶ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ನಾನು ಇಲ್ಲಿ ಉದ್ದ ಭಾಷಣ ಮಾಡುವುದಕ್ಕೆ ನಿಂತಿಲ್ಲ ಅಥವಾ ತಮ್ಮ ಮಾತನಾಡುವ ಹಕ್ಕನ್ನು ಮೊಟಕು ಮಾಡುವ ಉದ್ದೇಶವೂ ಕೂಡ ನನಗೆ ಇಲ್ಲ. ಶ್ರೀ ವೀರೇಂದ್ರ ಪಾಟೀಲರು ನಮಗೆಲ್ಲರಿಗೂ ಹಿರಿಯ ನಾಯಕರು. ನಾನು ಕೂಡ ಅವರ ಎರಡು ಚುನಾವಣೆಗಳಲ್ಲಿ ದುಡಿದಿದ್ದೇನೆ, ಓಡಾಡಿದ್ದೇನೆ, ತಿರುಗಾಡಿದ್ದೇನೆ, ನನ್ನ ಕೈಲಾದಷ್ಟು ಒಂದೆರಡು ಓಟುಗಳನ್ನಾದರೂ ಕೊಡಿಸಿದ್ದೇನೆ. ಆದರೆ ನೀವುಗಳು .....

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ನೀವು ಹೇಳುವ ವಿಚಾರಕ್ಕೂ ಇದಕ್ಕೂ ಸಂಬಂಧ ಇಲ್ಲ .....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ನೀವು ಕುಳಿತುಕೊಳ್ಳಿ, ನಾನು ಮಾತನಾಡಿದ ಮೇಲೆ ಹೇಳಿ.....

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ನಿಮಗೆ ಸತ್ಯ ಹೇಳಿದರೆ ಏತಕ್ಕೆ ಸಿಟ್ಟು ಬರುತ್ತದೆ? ಓಟು ಹಾಕಿದ್ದೇನೆ, ಓಡಾಡಿದ್ದೇನೆ ಎಂದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ನೀವು ಈ ಬಣ್ಣ ಕೊಡುತ್ತಾ ಇದ್ದೀರಲ್ಲ ಅದಕ್ಕೆ ನಾನು ಹೇಳುತ್ತಾ ಇದ್ದೇನೆ. ನಮಗೆಲ್ಲರಿಗೂ ಅವರು ಹಿರಿಯ ನಾಯಕರು. ಇವತ್ತಲ್ಲ, 1952ರಿಂದ ಸತತವಾಗಿ ಆ ಭಾಗದಿಂದ ಅವರು ಆಯ್ಕೆಯಾಗಿ ಬರುತ್ತಾ ಇದ್ದಾರೆ. ಇವೊತ್ತು ನಮಗೆಲ್ಲರಿಗೂ ಅವರು ಮಾರ್ಗದರ್ಶಕರೂ ಆಗಿದ್ದಾರೆ. ಆ ಮಾತು ಬೇರೆ. ಆದರೆ ಇವೊತ್ತು ಅವರು ಎತ್ತಿರತಕ್ಕಂಥ ಅನೇಕ ಪ್ರಶ್ನೆಗಳು ರಾಷ್ಟ್ರೀಯ ಮಹತ್ವವಾದಂಥ ಪ್ರಶ್ನೆಗಳಿವೆ. ಅದರ ಮೇಲೆ ಬೆಳಕು ಚೆಲ್ಲುವುದಕ್ಕೆ, ಅಥವಾ ಚರ್ಚೆಗೆ ತೆಗೆದುಕೊಳ್ಳತಕ್ಕಂಥಾದ್ದಕ್ಕೆ ಏನು ಆಗುತ್ತದೆ ಅಂದರೆ, ಈಗ ಕ್ಯಾಬಿನಟ್ ಡಿಸಿಶನ್ ಆಯಿತೋ ಇಲ್ಲವೋ, ಮಾನ್ಯ ಮುಖ್ಯಮಂತ್ರಿಯವರು ಹೇಳುವುದಕ್ಕೆ ಸಾಧ್ಯ ಇದೆಯೋ ಇಲ್ಲವೋ, ಅಲ್ಲಿ ವರ್ಕಿಂಗ್ ಕಮಿಟಿಯಲ್ಲಿ ಏನು ಆಯಿತು? ಪಾರ್ಲಿಮೆಂಟ್ ಬೋರ್ಡ್‌ನಲ್ಲಿ ಏನಾಯಿತು? ಎಂಬ ವಿಚಾರಗಳೆಲ್ಲ ಇವೆ. ಅವರು ಅನೇಕ ಸಮಸ್ಯೆಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಹೇಳುತ್ತಾ ಇದ್ದೇನೆ. ಅವರಿಗೆ ಎಲ್ಲಾ ವಿಚಾರಗಳೂ ಗೊತ್ತಿದೆ. ಏಕೆಂದರೆ ಅವರು ಹಿಂದೆ ಕಾಂಗ್ರೆಸ್ ಪ್ರೆಸಿಡೆಂಟ್ ಆಗಿದ್ದರು. ವರ್ಕಿಂಗ್ ಕಮಿಟಿಯಲ್ಲಿದ್ದರು, ಕೇಂದ್ರ ಸರ್ಕಾರದಲ್ಲಿದ್ದರು. ಅವರು ಕೂಡ ಅನೇಕ ಸಲ ಇದರಲ್ಲಿ ಭಾಗಿಯಾಗಿರಬಹುದು, ಚರ್ಚೆ ಮಾಡಿರಬಹುದು ಅನೇಕ ವಿಚಾರಗಳು ನಮ್ಮವರೆಗೂ ಬಂದು ಮುಟ್ಟುವುದಿಲ್ಲ. ಆದ್ದರಿಂದ ಆ ಎಲ್ಲಾ ವಿಚಾರಗಳಿಗೂ ಸಮಪರ್ಕವಾಗಿ ಉತ್ತರ ಸಿಗಬೇಕಾದರೆ ಅದು ಎಐಸಿಸಿ ಮೀಟಿಂಗ್‌ನಲ್ಲಿ ಸಿಗಬಹುದು. ಕೇಂದ್ರ ಸರ್ಕಾರದವರು ಉತ್ತರ ಕೊಡಬಹುದು. ಇಲ್ಲವೇ ಪಾರ್ಲಿಮೆಂಟ್‌ನಲ್ಲಿ ಸಿಗಬಹುದು. ಆದ್ದರಿಂದ ಇಲ್ಲಿ ಅವರು ಹೇಳಿದಂಥ ಮಾತುಗಳ ಚರ್ಚೆಯ ಅವಶ್ಯಕತೆ ಇದೆಯೋ ಇಲ್ಲವೋ ಎಂದು ನಾನು ಪ್ರಸ್ತಾಪ ಮಾಡಿದ್ದೇನೆ. ಮತ್ತು ಅದಕ್ಕೆಲ್ಲ ಇಲ್ಲಿ ಉತ್ತರ ಕೊಡತಕ್ಕದ್ದು ಬಹಳ ಇಕ್ಕಟ್ಟಾಗುತ್ತದೆ.

ತಮಗೂ ಕೂಡ ಗೊತ್ತಿದೆ. ತಾವು ಚಪ್ಪಾಳೆ ಬಾರಿಸಬಹುದು ಅಥವಾ ಹೇಳಬಹುದು. ಏಕೆಂದರೆ, ಸಮಾಧಾನಕ್ಕೋಸ್ಕರ. ಆದರೆ ಅವರು ಎತ್ತಿದಂತಹ ಅನೇಕ ಪ್ರಶ್ನೆಗಳಿಗೆ ಇಲ್ಲಿ ಉತ್ತರ ಕೊಡುವುದು ಸಾಧ್ಯವೇ ? ನಾವೂ ನೀವೂ ಅಂದರೆ ನಮ್ಮಿಬ್ಬರದೂ ನಾನು ಹೇಳುತ್ತಿದ್ದೇನೆ. ಅದಕ್ಕಾಗಿ ನಾನು ನಮ್ಮ ಹಿರಿಯ ನಾಯಕರಲ್ಲಿ ಕಳಿಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಇಲ್ಲಿ ಏನು ವಾತಾವರಣ ಇದೆ, ನಮ್ಮ ನಾಯಕರು ಮಾತಾಡಿದರೆ ನಮಗೂ ಕೂಡ ಅದರ ಬಗ್ಗೆ ತಿಳಿವಳಿಕೆ ಬರುತ್ತದೆ ಅಥವಾ ಅದೇನು ವಿಷಯ ಎಂದು ಅರ್ಥವಾಗುತ್ತದೆ. ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಂತಹ ಅನೇಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದರೆ ಬಹುಶಃ ಮುಖ್ಯಮಂತ್ರಿಗಳು ಅದರ ಬಗ್ಗೆ ಬೇಕಾದರೆ ಉತ್ತರ ಕೊಡುತ್ತಿದ್ದರು ಎಂದರೆ ಆ ಮಾತು ಬೇರೆ, ಆದರೆ ಕಷ್ಟವಾಗಬಹುದು ಎಂಬ ದೃಷ್ಟಿಯಿಂದ ನಾನು ಈ ಮಾತು ಹೇಳುತ್ತೇನೆ. ಮತ್ತು ಅವರು ಹಾಕಿದ ಪ್ರಶ್ನೆಗಳು ಉತ್ತರವಿಲ್ಲದೆ ಹಾಗೆಯೇ ಉಳಿಯುತ್ತವೆ. ಅವಕ್ಕೆ ಉತ್ತರ ಬೇಕೆಂದರೆ ಅಪ್ರೊಪ್ರಿಯೇಟ್ ಫೋರಂನಲ್ಲಿ ಅವನ್ನು ರೈಸ್ ಮಾಡಿದರೆ ಒಳ್ಳೆಯದಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ: ಸತ್ಯ ಕೇಳಲಿಕ್ಕೆ ಬಹಳ ಕಟು ಇರುತ್ತದೆ. ಆದರೆ ಅದನ್ನು ಕೇಳುವ ಶಕ್ತಿ ಇರಬೇಕಾಗುತ್ತದೆ. ಈಗ ಮಾನ್ಯ ಹಿರಿಯ ನಾಯಕರಾದ ವೀರೇಂದ್ರ ಪಾಟೀಲರು ಏನು ಹೇಳಿದ್ದಾರೆ ? ಅವರು ಹೊಸದೇನೂ ಹೇಳಿಲ್ಲ, ಎಲ್ಲಿ ಯಾರು ತಪ್ಪು ಮಾಡಿದ್ದಾರೆ ಎಂದು ಸ್ಪಷ್ಟವಾಗಿ ಮನಸ್ಸು ಬಿಚ್ಚಿ ಹೇಳುತ್ತಿದ್ದಾರೆ. ನಾವು ಚರ್ಚೆಯಾಗಬೇಕೆಂದು ಹೇಳಿದ್ದೇವೆ Today he is talking like a statesman. ಒಬ್ಬ ಕಾಂಗ್ರೆಸ್ ಪಕ್ಷದ ಲೀಡರಾಗಿ ಮಾತನಾಡುತ್ತಿಲ್ಲ. ಹಾಗಾಗಿ ಈಗ ಅವರ ಫೋರಂ ಯಾವುದು ಮಾತಾಡಲಿಕ್ಕೆ ? ಅವರು ಪಾರ್ಲಿಮೆಂಟಿಗೆ ಹೋಗಿ ಮಾತನಾಡಬಹುದೇನು ? ಅವರಿಗೆ ಅಲ್ಲಿ ಫೋರಂ ಇದೆಯೇನು ? So he is using the best forum. ಇಲ್ಲಿನದು ರಾಜ್ಯದ ಜನತೆಗೆ ಗೊತ್ತಾಗಬೇಕಾಗಿದೆ. ವೀರೇಂದ್ರ ಪಾಟೀಲರ ವ್ಯೂಸ್ ಏನು, ತಪ್ಪು ಯಾರು ಮಾಡಿದ್ದಾರೆ ಎನ್ನುವುದು ಗೊತ್ತಾಗಬೇಕಾಗುತ್ತದೆ. ಹಾಗಾಗಿ ಅವರು ಚರ್ಚೆಯನ್ನು ಮಾಡುವಾಗ ಈ ದೃಷ್ಟಿಯಿಂದ ಹೋಗಬೇಡಿ. ಆ ಮಾರ್ಗ ಹಿಡಿಯಬೇಡಿ ಎಂದು ಹೇಳುವುದು ಸರಿಯಲ್ಲ. ಅವರಿಗೆ ಏನು ಹೇಳಬೇಕೆಂದು ಇಚ್ಛೆ ಇದೆ ಅದನ್ನು ಹೇಳಲಿಕ್ಕೆ ಸಂಪೂರ್ಣ ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ: ಸನ್ಮಾನ್ಯ ದೇಶಪಾಂಡೆಯವರು ಹೇಳಿದ ಮಾತು ಸರಿ. ಆದರೆ ಇಲ್ಲೇನಾಗಿದೆ ಎಂದರೆ, ಇಲ್ಲಿ ಚರ್ಚೆ ಹೇಗೆ ಪ್ರಾರಂಭವಾಗಿದೆ, ಬೆಳಿಗ್ಗೆ ವಿದ್ಯಾಮಾನ ಏನು ನಡೆದಿದೆ ಅದು ಸನ್ಮಾನ್ಯ ವೀರೇಂದ್ರ ಪಾಟೀಲರಿಗೆ ಮುಟ್ಟಿರಲಿಕ್ಕಿಲ್ಲ. ಬೆಳಿಗ್ಗೆ ಏನಾಯಿತು ಎಂದರೆ ನಾನು ಹೇಳಿಕೆ ಕೊಟ್ಟೆ. ಕರ್ನಾಟಕ ರಾಜ್ಯದಲ್ಲಿ ನಡೆದ ಸೀಮಿತವಾದ ಘಟನೆಗಳ ಬಗ್ಗೆ ನಾನು ಹೇಳಿಕೆ ಕೊಟ್ಟೆ. ಆ ಹೇಳಿಕೆ ಮೇಲೆ ಇವತ್ತು ಚರ್ಚೆ ನಡೆದಿದೆ. ಅದನ್ನು ಇಲ್ಲಿ ಮರೆಯಬಾರದು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:– ಈಗ ಪ್ರಶ್ನೆ ಇಷ್ಟೆ. ಯಾವ ರೀತಿ ಮಾತಾಡಬೇಕೆಂಬುದು ಅವರವರ ಸ್ವಾತಂತ್ರ್ಯಕ್ಕೆ ಬಿಟ್ಟಿದ್ದು, ನಾನು ಅದಕ್ಕೆ ಅಡ್ಡಿ ಬರುವುದಿಲ್ಲ. ಸನ್ಮಾನ್ಯ ವೀರೆಂದ್ರ ಪಾಟೀಲರು ಮಾತನಾಡಬಹುದು, ತಾವು ಮಾತನಾಡಬಹುದು. ಆದರೆ ನನ್ನ ವಿಚಾರ ನಾನು ಹೇಳಿಬಿಡುತ್ತೇನೆ. ಏಕೆಂದರೆ, ನಾನು ಒಂದು ಹೇಳಿಕೆ ಕೊಟ್ಟಿದ್ದೇನೆ. ಆ ಹೇಳಿಕೆ ಮೇಲೆ ಇವತ್ತು ಚರ್ಚೆ ನಡೆದಿದೆ.

(ಗೊಂದಲ)

Sri M. Veerappa Moily:– You may talk anything. But it is left to you. ನಿಮ್ಮ

ಸ್ವಾತಂತ್ರ್ಯಕ್ಕೆ, ಯಾರ ಸ್ವಾತಂತ್ರ್ಯಕ್ಕೂ ನಾನು ಅಡ್ಡಿ ಬರುವುದಿಲ್ಲ. ಏಕೆಂದರೆ, ನಾನು ಹೇಳಿಕೆ ಕೊಟ್ಟ ಮೇಲೆ ಅದರ ಮೇಲೆ ಚರ್ಚೆ ನಡೆದಿದೆ. ನಾಳೆ ನಾನು ಉತ್ತರ ಕೊಡಬೇಕಾಗುತ್ತದೆ. ಇಡೀ ಸದನದ ಸದಸ್ಯರು ಉತ್ತರವನ್ನು ನಿರೀಕ್ಷೆ ಮಾಡುತ್ತಾರೆ. ನಾನು ಕರ್ನಾಟಕ ರಾಜ್ಯದ ನನ್ನ ಆಡಳಿತೆಯ ಬಗ್ಗೆ ಉತ್ತರ ಕೊಡಬಹುದೇ ಹೊರತು ಇಡೀ ರಾಷ್ಟ್ರದ, ವಿಶ್ವದ ರಾಜಕೀಯದ ಬಗ್ಗೆ ಅಥವಾ ಡಿಪ್ಲೊಮೆಸಿ ಬಗ್ಗೆ ಅಥವಾ ರಾಜಕೀಯ ತಂತ್ರದ ಬಗ್ಗೆ ಯಾವ ಪಕ್ಷ ಯಾವ ರಾಜಕೀಯ ತಂತ್ರ ಉಪಯೋಗ ಮಾಡುತ್ತದೆ, ರಾಷ್ಟ್ರದ ರಾಜಕಾರಣ ಏನು – ಅದಕ್ಕೆಲ್ಲ ಉತ್ತರ ಕೊಡಲಿಕ್ಕೆ ನನಗೆ ಅಸಾಧ್ಯವಾಗುತ್ತದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಿನ್ನೆ ದಿನ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಾನ್ಯ ಸಭಾನಾಯಕರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಪ್ರತಿಪಕ್ಷದ ಎಲ್ಲಾ ಫ್ಲೋರ್ ಲೀಡರ್‌ಗಳನ್ನು ಕರೆದು ಮಾತನಾಡುತ್ತೇನೆ ಎಂದು ಹೇಳಿ ಇವತ್ತು ಬೆಳಿಗ್ಗೆ ಹತ್ತು ಕಾಲು ಗಂಟೆಗೆ ಕರೆದಿದ್ದರು.

Sri A.K. Anantha Krishna: Point of order.

Chairman: Let us hear him.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಏನೂ ಪಾಯಿಂಟೂ ಇಲ್ಲ, ಏನೂ ಆರ್ಡರೂ ಇಲ್ಲ. ನಾನು ಮಾತನಾಡುತ್ತೇನೆ. I can be thrown out, I won't yeild. Unless you say you get out, I won't leave.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಪಾಯಿಂಟೇ ಇಲ್ಲ. ಆರ್ಡರ್ ಎಲ್ಲಿಂದ ಬಂತು ?

(ಗೊಂದಲ)

Sri P.G.R. Sindhya: I am on a point of order.

ನಾನು ಸುಮ್ಮನೆ ಕುಳಿತುಕೊಂಡು ಹೋಗುವುದಕ್ಕೆ ಬಂದಿದ್ದೇನೆಯೇ ? ನಾನು ಮಾತನಾಡುವಾಗ ಏನು ಪಾಯಿಂಟ್ ಆಫ್ ಆರ್ಡರ್ ?

(ಗೊಂದಲ)

Sri A.K. Anantha Krishna:– Hear me.

(ಗೊಂದಲ)

Madam Chairman: Have patience.

Sri P.G.R. Sindhya: I have patience.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ನನ್ನದು ಕೂಡ ಕ್ರಿಯಾಲೋಪ ಇದೆ. ನೀವು ನನಗೆ ಅವಕಾಶವನ್ನು ಕೊಡಿ.

Sri. P.G.R. Sindhya:– I am on a point of order. ನನಗೆ ಅವಕಾಶ ಕೊಡಿ.

ಛೇರ್ಮನ್:– ಅವರು ಮುಗಿಸಲಿ.

ಶ್ರೀ ವಾಟಾಳ್ ನಾಗರಾಜ್:– ನಿಮ್ಮದೇನು ಪಾಯಿಂಟ್ ಆಫ್ ಆರ್ಡರ್, ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಇಲ್ಲಿ ನನಗೊಬ್ಬರು ಅಧ್ಯಕ್ಷರು.

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷಿಣಿಯವರೇ .....

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಾನು ಯೀಲ್ಡ್ ಆಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ನಾನು ಮಾನ್ಯ ಸಿಂಧ್ಯರವರಿಗೆ ಅವಕಾಶವನ್ನು ಕೊಟ್ಟರೆ ಇವರೊಬ್ಬರು ಅಧ್ಯಕ್ಷರು ಎಂದು ಹೇಳುತ್ತಾರೆ.

(ಗೊಂದಲ)

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:– ಅಧ್ಯಕ್ಷರೇ, ಅವರು ಪಾಯಿಂಟ್ ಆಫ್ ಆರ್ಡರ್ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:– ರಾಮನ ಸುದ್ದಿಗೆ ಹೋದರೆ ಇದೇ ಕಥೆ, ಎಲ್ಲರಿಗೂ ಇದೇ ಪರಿಸ್ಥಿತಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷಿಣಿಯವರೇ, ಪ್ರತಿಪಕ್ಷದ ಎಲ್ಲಾ ಫ್ಲೋರ್ ಲೀಡರ್‌ಗಳನ್ನು ಕರೆದು ಮಾತನಾಡುತ್ತೇನೆ ಎಂದು ಸಭಾನಾಯಕರು ನಮಗೆಲ್ಲಾ ಹೇಳಿ ಬೆಳಿಗ್ಗೆ ಕರೆಸಿ ಮಾತನಾಡಿದರು. ಮಾತನಾಡಿದಂಥ ಸಂದರ್ಭದಲ್ಲಿ ನಿಲುವಳಿ ಸೂಚನೆ ಚರ್ಚೆಯಾಗಿಯೇ ಮುಂದುವರಿಯಲಿ, ನಾನು ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆ, ಸ್ಟೇಟ್‌ಮೆಂಟ್ ಮೇಲೂ ಚರ್ಚೆ ಮುಂದುವರಿಯಲಿ ಎನ್ನತಕ್ಕಂಥ ಮಾತನ್ನು ಹೇಳಿದರು. ನಾವು ಅದಕ್ಕೆ ಒಪ್ಪಿಕೊಂಡೆವು. ಏಕೆಂದರೆ, ಮಾನ್ಯ ಮೊಯಿಲಿಯವರು ಮುಖ್ಯಮಂತ್ರಿಗಳಾದ ಮೇಲೆ ಅನೇಕ ವಿಚಾರಗಳಲ್ಲಿ he has made a good beginning. ಇದರ ಜೊತೆಗೆ ಸಂಸದೀಯ ವ್ಯವಹಾರದಲ್ಲಿ ಚರ್ಚೆಗಳ ಬಗ್ಗೆ ಈ ರೀತಿಯ ಗಲಭೆಗಳಿಗೆ ಅವಕಾಶವನ್ನು ಕೊಡುವುದಿಲ್ಲ, ಪ್ರತಿಪಕ್ಷದವರು ಎಷ್ಟೇ ಕ್ಷೀಣವಾಗಿದ್ದರೂ ಸಹ ಅವರ ಮಾತು ಕೇಳುತ್ತಾರೆ ಎನ್ನುವ ಒಂದು ಗೌರವದಿಂದ ನಂಬಿಕೆಯಿಂದ ನಾವು ಇದಕ್ಕೆಲ್ಲಾ ಒಪ್ಪಿಕೊಂಡಿದ್ದೇವೆ. ಅವರ ಹೇಳಿಕೆಯ ಪ್ರಾರಂಭದಲ್ಲಿ ವಿರೋಧಿ ಪಕ್ಷದ ನಾಯಕರಾದ ದೇಶಪಾಂಡೆ, ಶಾಸಕರುಗಳಾದ ಸಿಂಧ್ಯ, ಬೈರೇಗೌಡ, ರಾಯರೆಡ್ಡಿ, ವೈ.ಕೆ. ರಾಮಯ್ಯ ಇವರುಗಳು ಸಲ್ಲಿಸಿರುವ ನಿಲುವಳಿ ಸೂಚನೆಗೆ ಮಾನ್ಯ ಮುಖ್ಯಮಂತ್ರಿಗಳು ನೀಡಿರುವ ಹೇಳಿಕೆ ಅಂತಲೇ ಇದೆ, ಇರಲಿ. ಇದನ್ನು I am not insisting. ನಾನು ಏನು ಹೇಳುತ್ತಿದ್ದೇನೆಂದರೆ ಮಾನ್ಯ ಖರ್ಗೆಯವರು ಹೇಳಿದ ಹಾಗೆ ಮಾನ್ಯ ವೀರೇಂದ್ರ ಪಾಟೀಲರು ನಮಗೆಲ್ಲರಿಗೂ ಬಹಳ ಗೌರವಾನ್ವಿತ ಮುಖಂಡರು. ಈಗ ಅವರು ಹೇಳತಕ್ಕಂಥ ಎಲ್ಲಾ ವಿಚಾರಗಳನ್ನು ನಾವು ಯಾರೂ ಒಪ್ಪದೇ ಇರಬಹುದು. ಈಗ ನಾನು ಹೇಳತಕ್ಕಂಥದ್ದು .....

Madam Chairman:- Please be brief. Time is running out.

Sri P.G.R. Sindhia:- We will continue to discuss tomorrow. I have not made my point clear.

ಹಾಗಾದರೆ ನಾಳೆ ಮಾಡೋಣ.

ಛೇರ್ಮೆನ್:– ಅಲ್ಲ. ಪಾಪ ಅವರು ಆರ್ಧದಲ್ಲಿಯೇ ನಿಲ್ಲಿಸಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಾಳೆ ಮಾಡೋಣ.

ಶ್ರೀ ಬಸವರಾಜ ರಾಯರೆಡ್ಡಿ:– ನಾಳೆಗೆ ಈ ಚರ್ಚೆಯನ್ನು ಮುಂದುವರಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಏನು ಪಾಯಿಂಟನ್ನು ನಾನು ಹೇಳುತ್ತೇನೆ ಎನ್ನುವುದಕ್ಕೆ ಅವಕಾಶವನ್ನೇ ಕೊಡುವುದಿಲ್ಲ ಎಂದು ಹೇಳಿದರೆ ಹೇಗೆ ?

Sri Jeevaraj Alva:- He has raised a very very vital issue.

(ಗೊಂದಲ)

Sri P.G.R. Sindhia:– I have come here as elected representative. Nobody could cow down me like that.

Madam Chairman:– Sorry.

Sri P.G.R. Sindhya:- I must make my point clear.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:– ಇವರು ಯಾರೋ ಕಿರುಚಾಡಿಬಿಟ್ಟರೆ ನಾವು ಹೆದರಿಕೊಳ್ಳುತ್ತೇವೆಯೇ ? ಇವರ ಯೋಗ್ಯತೆಗಳೆಲ್ಲಾ ಎಲೆಕ್ಷನ್‌ಗೆ ಹೋದರೆ ಏನಾಗುತ್ತದೆ ಎಂದು ಗೊತ್ತಿದೆ. ಇವತ್ತು ಪ್ರಧಾನಿಗಳು ಹೇಳಿದ್ದಾರೆ, ಚುನಾವಣೆಗಳನ್ನು ಎದುರಿಸುವ ಸಮಯ ಅಲ್ಲ ಇದು ಎಂದು ಹೇಳಿದ್ದಾರೆ. ಅದು ಏತಕ್ಕೆ ಎಂದು ನಮಗೆ ಗೊತ್ತಿದೆ. ಆದುದರಿಂದ ಕಿರುಚಾಟ, ಅರಚಾಟ ಇವೆಲ್ಲ ಸರಿಯಲ್ಲ. ನಿಮಗೇನಾದರೂ ಪಾಯಿಂಟ್ ಇದ್ದರೆ ಎದ್ದು ನಿಂತುಕೊಂಡು ಹೇಳಿ, ಯಾರು ಬೇಡ ಎಂದು ಹೇಳುತ್ತಾರೆ. ನೀವು ಕೂಗಾಡಿಬಿಟ್ಟರೆ ಏನಾಯಿತು ಎಂದು ಗೊತ್ತಿದೆಯೆಲ್ಲ. ಬಂಗಾರಪ್ಪನವರಿಗೆ ಮಾಡಿದಿರಲ್ಲ, ಕೂಗಾಡಿ ಕೂಗಾಡಿ ಅವರನ್ನು ಮನೆಗೆ ಕಳುಹಿಸಿದಿರಲ್ಲಾ, ಹಾಗೆಯೇ ಇವರನ್ನೂ ಕಳುಹಿಸಿ ಗೊತ್ತಾಗುತ್ತದೆ ನಿಮಗೆ.

ಛೇರ್ಮೆನ್:– ಈಗ ಅವರು ಕಂಪ್ಲೀಟ್ ಮಾಡಲಿ, ಆಮೇಲೆ ನೀವು ಮಾತನಾಡಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:– ಅವರೆಲ್ಲ ಪೂರ್ತಿ ಮಧ್ಯದಲ್ಲಿ ಇಂಟರ್‌ಫಿಯರ್ ಆದರೆ ನಾನ ಏನು ಮಾಡುವುದಕ್ಕಾಗುತ್ತದೆ ?

(ಗೊಂದಲ)

ಛೇರ್ಮೆನ್:– ಇಂಟರಪ್‌ಷನ್ಸ್‌ಗೂ ಒಂದು ಇತಿಮಿತಿ ಇದೆ. ಅವರು .....

(ಗೊಂದಲ)

ಶ್ರೀ ವಾಟಳ್ ನಾಗರಾಜ್:– ನನ್ನದೂ ಒಂದು ಕ್ರಿಯಾಲೋಪ ಇದೆ.

(ಗೊಂದಲ)

Sri A.K. Anantha Krishna:– He talks of discipline .....

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಾನು ಇಷ್ಟೇ ಹೇಳತಕ್ಕದ್ದು. ಮಾನ್ಯ ವೀರೇಂದ್ರ ಪಾಟೀಲರು ಮಾತನಾಡುವುದರ ಬಗ್ಗೆ ನನಗೆ ಒಂದು ಗಾದೆ ಮಾತು ಜ್ಞಾಪಕಕ್ಕೆ ಬರುತ್ತದೆ. ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಏಕೆ ಮುಟ್ಟಿ ನೋಡಿಕೊಳ್ಳಬೇಕು ? ಅವರು ಮಾತನಾಡಲಿ ಬಿಡಿ. ಅವರು ಮಾತನಾಡಿದ್ದೆಲ್ಲ ಒಪ್ಪಬೇಕು ಎಂದೇನಿಲ್ಲ. ಅವರು ಮಾತನಾಡಿದ್ದರ ಬಗ್ಗೆ ಉತ್ತರವನ್ನು ನಾನು ನಿರೀಕ್ಷಣೆ ಮಾಡುತ್ತಿಲ್ಲ.

ಛೇರ್ಮನ್:– ಅವರಿಗೆ ಮಾತನಾಡುವುದಕ್ಕೆ ಬಿಡಿ ಎಂದೇ ನಿಮಗೆ ಹೇಳುತ್ತಿರುವುದು.

ಶ್ರೀ ಎಂ. ವೀರಪ್ಪಮೊಯಿಲಿ:– ಈಗ ತಾವು ಮಾತನಾಡುವುದಕ್ಕೆ ಅಡ್ಡಿ ಬರುವುದು, ನಾವು ಬರುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಾವು ಅಡ್ಡಿ ಬರುತ್ತಾ ಇಲ್ಲ. ಖರ್ಗೆಯವರು ಅಡ್ಡಿ ಬಂದಿದ್ದು. ನಾವು ಏಕೆ ಅಡ್ಡಿ ಬರೋಣ. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ನಾವು ಹೇಳುತ್ತಿದ್ದೇವೆ.

ಛೇರ್ಮನ್:– ಅವರು ಮಾತನಾಡುವುದಕ್ಕೆ ಬಿಡಿ. ನೀವು ಕೇಳುತ್ತಿಲ್ಲ .....

(ಗೊಂದಲ)

ಛೇರ್ಮನ್:– ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:– ನಾನು ಒಂದು ನಿಮಿಷ ಮಾತನಾಡುತ್ತೇನೆ.

ಛೇರ್ಮನ್:– ನೀವು ಒಂದು ನಿಮಿಷ ಎಂದು ಹೇಳುವುದಕ್ಕೇ ಒಂದು ನಿಮಿಷ ತೆಗೆದುಕೊಳ್ಳುತ್ತೀರಲ್ಲ. ನಾವು ಅವರಿಗೆ ಅವಕಾಶ ಮಾಡಿಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:– ಒಂದೇ ಒಂದು ನಿಮಿಷ. ಇಲ್ಲಿ ಮಾನ್ಯ ವೀರೇಂದ್ರ ಪಾಟೀಲರ ಬಗ್ಗೆ ಮಾನ್ಯ ಖರ್ಗೆಯವರಾಗಲೀ ಅಥವಾ ಬೇರೆಯವರಾಗಲೀ ಅವರ ವಿರುದ್ಧ ಮಾತನಾಡತಕ್ಕ ಪ್ರಶ್ನೆ ಅಲ್ಲ. ಒಂದು ಪ್ರಶ್ನೆ ಏನೆಂದರೆ, ವೀರೇಂದ್ರ ಪಾಟೀಲರು ಮಾತನಾಡುವಾಗ ದೇಶದ ಸಮಗ್ರ ಚಿಂತನೆಯನ್ನು ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅವರ ಹೇಳಿಕೆಯಲ್ಲಿ ಇದು ಕೇವಲ ಕರ್ನಾಟಕ ರಾಜ್ಯಕ್ಕೆ ಸಂಬಂಧ ಎಂದು ಎಲ್ಲೂ ಹೇಳಲಿಲ್ಲ. ಸಮಗ್ರವಾಗಿ ಅಯೋಧ್ಯೆ ಘಟನೆ ಹಿನ್ನೆಲೆಯ ಬಗ್ಗೆ ಚಿಂತನೆ ಇದೆ. ಆದ್ದರಿಂದ ಒಂದು ಪ್ರಶ್ನೆ.

(ಗೊಂದಲ)

ಛೇರ್ಮನ್:– ದಯವಿಟ್ಟು ಅವರಿಗೆ ಮಾತನಾಡುವುದಕ್ಕೆ ಬಿಡಿ .....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಇದು ತಾನು ಕಳ್ಳ ಪರರನ್ನು ನಂಬ ಎಂಬ ಗಾದೆ ಇದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಅವರಿಗೆ ಮಾತನಾಡುವುದಕ್ಕೆ ಸಂಪೂರ್ಣ ಸ್ವಾತಂತ್ರ್ಯ ಇರಬೇಕು. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅವರು ಮಾತನಾಡುತ್ತಿದ್ದಾರೆ. ಇಲ್ಲಿ ಉತ್ತರ

ಕೊಡುವುದಕ್ಕೆ ಯಾರೂ ಇಲ್ಲ. ಇವರು ಅಲ್ಲಿಗೆ ಹೋಗಬೇಕು. ಅಲ್ಲಿಂದ ಲಂಡನ್‌ಗೆ ಹೋಗಬೇಕು, ಇದು ಏಕೆ ಬೇಕು ?

ಛೇರ್ಮನ್:– ಒಂದು ನಿಮಿಷ ಆಯಿತೇ ?

ಶ್ರೀ ವಾಟಾಳ್ ನಾಗರಾಜ್:– ದಯವಿಟ್ಟು ಒಂದು ನಿಮಿಷ .....

ಛೇರ್ಮನ್:– ಅವರೂ ನಿಮ್ಮ ಹಾಗೆ ಓಟು ತೆಗೆದುಕೊಂಡು ಬಂದಿರುವವರು. He is on his legs.

(INTERRUPTIONS)

ಶ್ರೀ ವಾಟಾಳ್ ನಾಗರಾಜ್:– ಅನಂತಕೃಷ್ಣ ಅವರೇ, ನೀವು ಓಟು ತೆಗದುಕೊಂಡು ಬಂದಿಲ್ಲವೆಂದು ನಾನು ಹೇಳಿದನೇ. ಅವರು ಓಟು ತೆಗೆದುಕೊಳ್ಳದೇ ಇದ್ದರೆ ಇಲ್ಲಿ ಅವರನ್ನು ಸೇರಿಸುವ ಹಾಗೆಯೇ ಇಲ್ಲ.

(ಗೊಂದಲ)

ಛೇರ್ಮನ್:– ದಯವಿಟ್ಟು ಕುಳಿತುಕೊಳ್ಳಿ .....

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷಿಣಿಯವರೆ .....

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಈಗ ಪೂರ್ಣ ಅವಕಾಶ ಒಂದು ಕಡೆ .....

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷಿಣಿಯವರೇ, ಈಗ ಮಾನ್ಯ ಸಂಸದೀಯ ಸಚಿವರು ಒಂದು ಕಡೆ, ಮತ್ತೊಂದು ಕಡೆ ಕಾಂಗ್ರೆಸ್. ಇದು ಏನು ? ಅವರಲ್ಲೇ ಸಾಮರಸ್ಯವಿಲ್ಲ.

ಛೇರ್ಮನ್:– ತಾವು ಕುಳಿತುಕೊಳ್ಳಿ .....

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಈ ವಿಷಯದ ಬಗ್ಗೆ ಪೂರ್ಣ ಅವಕಾಶ ಚರ್ಚೆಗೆ ಬೇಕು ಎನ್ನುವ ಉದ್ದೇಶದಿಂದಲೇ ವಿರೋಧ ಪಕ್ಷದವರು ನಾವು ಎಲ್ಲ ಸೇರಿ ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಸ್ಟೇಟ್‌ಮೆಂಟ್ ಕೊಡಿಸಿ ಯಾವುದೇ ರೀತಿಯಲ್ಲಿ ಯಾವ ಬಂಧನಕ್ಕೂ ಒಳಗಾಗಬಾರದು ಎನ್ನುವ ದೃಷ್ಟಿಯಿಂದಲೇ ಮಾಡಿದ್ದೇವೆ. ಆದರೆ .....

ಶ್ರೀ ವಾಟಾಳ್ ನಾಗರಾಜ್:– ನಮಗೆ ಮುಖ್ಯಮಂತ್ರಿಗಳ ಬಗ್ಗೆ ತಕರಾರು ಇಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಸ್ವಲ್ಪ ಇರಿ. ಈ ವಿಷಯದ ಮೇಲೆ ಅಯೋಧ್ಯೆಯಲ್ಲಿ ಆಗಲಿ, ಕರ್ನಾಟಕದಲ್ಲಿ ಆಗಲೀ ಎಷ್ಟುಬೇಕಾದರೂ ಮಾತನಾಡಬಹುದು. ಆದರೆ ಮಾನ್ಯ ಖರ್ಗೆಯವರು ಹೇಳಿದಂತಹ ವಿಷಯ ಏನು ಎಂದರೆ, ಉದಾಹರಣೆಗೆ financial scam, Solanki's episode – ಇದನ್ನು ಇಲ್ಲಿ ಹೇಳಿಕೊಂಡು ಕುಳಿತರೆ ಹೇಗೆ ಉತ್ತರ ಕೊಡುವುದು, ಉತ್ತರ ಕೊಡುವವರು ಯಾರು ? ಈ ವಿಷಯಕ್ಕೆ ಸಂಬಂಧಪಟ್ಟ ವಿಷಯ .....

(ಗೊಂದಲ)

ಡಾ. ಜೀವರಾಜ್ ಆಳ್ವ:– ಆ ವಿಷಯ ಇದರಲ್ಲಿ ಎಲ್ಲಿದೆ ಎಂದು ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಅಂತಹ ವಿಷಯಗಳಿಗೆ ಈ ವಿಷಯದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ ಎನ್ನುವ ಮಾತನ್ನು ಹೇಳಿದರು .....

(ಗೊಂದಲ)

ಶ್ರೀ ಸಿ. ಬೈರೇಗೌಡ:– ಇದು ಮಾನ್ಯ ಪ್ರಧಾನ ಮಂತ್ರಿಗಳಾಗಿರತಕ್ಕ ನರಸಿಂಹರಾಯರಿಗೂ ಮತ್ತು ಬಿಜೆಪಿ ಪಕ್ಷದವರದ್ದೂ ಪಿತೂರಿ. ಇದನ್ನೆಲ್ಲಾ ಮುಚ್ಚಿ ಹಾಕುವುದಕ್ಕೆ .....

(ಗೊಂದಲ)

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಇದನ್ನು ಬಿಟ್ಟು ಯಾರು ಎಷ್ಟುಬೇಕಾದರೂ ಮಾತನಾಡಬಹುದು. ಅದಕ್ಕೆ ಅವಕಾಶ ಇದೆ.

ಶ್ರೀ ಸಿ. ಬೈರೇಗೌಡ:– ಇದನ್ನೆಲ್ಲಾ ಮುಚ್ಚಿ ಹಾಕುವುದಕ್ಕೆ .....

(ಗೊಂದಲ)

ಛೇರ್ಮನ್:– ಮಾನ್ಯ ವೀರೇಂದ್ರ ಪಾಟೀಲರು ಹೇಳುವುದನ್ನು ಹೇಳುತ್ತಾರೆ. ನೀವು ಆಮೇಲೆ ಮಾತನಾಡಿ. You please confine to the subject matter before us. ತಮಗೆ ಎಷ್ಟು ಹೊತ್ತು ಬೇಕು ?

ಶ್ರೀ ವೀರೇಂದ್ರ ಪಾಟೀಲ್:– ಶ್ರೀಮಾನ್ ಖರ್ಗೆಯವರು ಮತ್ತು ಎರಡನೆಯ ಮಾನ್ಯ ಸದಸ್ಯರು ಹೇಳಿದಂತಹ ವಿಚಾರವನ್ನು ನಾನು ಕೇಳಿದ್ದೇನೆ. ನಮ್ಮ ದೇಶದ ಮೇಲೆ ಮೊದಲನೆ ಸಲ ಇಂತಹ ಒಂದು ಪ್ರಹಾರ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ, ಅನೇಕರು ಹೇಳಿದರು. ಮಹಾತ್ಮಾಜಿ ಅವರ ಅಸಾಸಿನೇಷನ್ ಆದಾಗ ಇಷ್ಟು ಅನಾಹುತ ಆಗಿರಲಿಲ್ಲ. ಈಗ ಅದಕ್ಕೂ ಹೆಚ್ಚು ಅನಾಹುತ ಆಗಿದೆ ಎಂದು ಹೇಳಿದರು.

ಈ ದೇಶದಲ್ಲಿ ಸೆಕ್ಯುಲರಿಸಮ್ ಇರಬೇಕೋ ಇರಬಾರದೋ ಎನ್ನುವಂಥದ್ದು ಕೇವಲ ಪಾರ್ಲಿಮೆಂಟಿನ ಸ್ವತ್ತಲ್ಲ. ಇದರ ಬಗ್ಗೆ ನಾವೆಲ್ಲಾ ವಿಚಾರ ಮಾಡಬೇಕಾಗಿದೆ. ನಾನು ಅದಕ್ಕೆ ಹೇಳಿದೆ, ನಾನು ನಾಗರೀಕನಾಗಿ ಈ ಪ್ರಶ್ನೆಯನ್ನು ಎತ್ತುತ್ತಿದ್ದೇನೆ ಎಂದು. ಮತ್ತು ನಾನು ಒಬ್ಬ ಕಾಂಗ್ರೆಸ್ ಪಕ್ಷದ ಸದಸ್ಯನಾಗಿ ಈ ಪ್ರಶ್ನೆಯನ್ನು ಎತ್ತುತ್ತಿದ್ದೇನೆ. ಇದಕ್ಕೂ ಮೊದಲು ಮಾತನಾಡುವಾಗ ನಾನು ಹೇಳಿದ್ದೆ. ನಾನು ಯಾರಿಗೂ ಮುಖ ನೋಡಿ ಮಣೆ ಹಾಕುವುದಿಲ್ಲ, ನನ್ನ ಮನಸ್ಸಿನಲ್ಲಿ ನನ್ನ ಕಾನ್‌ಷಸ್‌ನಲ್ಲಿ ಏನು ಬರುತ್ತದೆ ಅದನ್ನು ನಾನು ಹೇಳುತ್ತೇನೆ ಎಂದು ಹೇಳಿದೆ. ಇದು ದೇಶದಲ್ಲಿ ಸೆಕ್ಯುಲರಿಸಂ ಇರಬೇಕೇ ಹೋಗಬೇಕೇ ಎನ್ನುವಂಥಾದ್ದು ಪಾರ್ಲಿಮಂಟಿನ ಪ್ರಶ್ನೆಯಲ್ಲ ಎಲ್ಲರ ಪ್ರಶ್ನೆ. ನಾವು ಕೂಡ ಇದರ ಬಗ್ಗೆ ಯೋಚನೆ ಮಾಡಬೇಕು. ಒಂದು ವೇಳೆ ದೇಶದಲ್ಲಿ ಸೆಕ್ಯುಲರಿಸಮ್ ಬೇಡ, ಕಮ್ಯುನಲಿಸಮ್ ಇರಬೇಕು ಎಂದರೆ ನಾನು ಒಪ್ಪುವುದಿಲ್ಲ, ಯಾರಾದರೂ ಒಪ್ಪಬಹುದು; ನಾನು ಒಪ್ಪುವ ಹಾಗೆ ಇಲ್ಲ, ಈ ಮನೆ ಒಪ್ಪಲಿಕ್ಕೆ ಇಲ್ಲ; ಅಂದರೆ ಏನು ಮಾಡುತ್ತೀರಿ ಎಂದು ಪ್ರಶ್ನೆ ಬರುತ್ತದೆ. ಅದಕ್ಕಾಗಿ ಇದು ಪಾರ್ಲಿಮೆಂಟಿನ ಪ್ರಶ್ನೆ ಅಲ್ಲ, ಅಥವಾ ಇದು ಒಂದು ಪಕ್ಷದ ಪ್ರಶ್ನೆ ಅಲ್ಲ, ನಾನು ಎಲ್ಲಾ ಪಕ್ಷಗಳಿಗೂ ಹೇಳಿದೆ. ದೇಶವೇ ಹೋದರೆ ನಿಮ್ಮ ಪಕ್ಷಗಳು ಎಲ್ಲಿ ಉಳಿಯುತ್ತವೆ ಎಂದು ಹೇಳಿದೆ. ನಾನು ಹಾಗೆಯೇ ಶುರು ಮಾಡಿದೆ. Where are you? If the nation goes to dogs, your party also goes to dogs. ಅದಕ್ಕೆ ಪ್ರತಿಯೊಬ್ಬರು ಮೊದಲು ದೇಶದ ಬಗ್ಗೆ ವಿಚಾರ ಮಾಡಬೇಕು ಅನ್ನುವುದನ್ನು ನಾನು ಮೊದಲೇ ಹೇಳಿದ್ದೇನೆ. ನಾನು ಹೇಳಿದಂತಹ ವಿಚಾರಗಳು ಈ ರಾಜ್ಯ ಸರ್ಕಾರಕ್ಕೆ ದೋಷಾರೋಷಣೆ ಮಾಡಬೇಕು ಎನ್ನುವಂತಹ ವಿಚಾರದಿಂದ ಹೇಳಿಲ್ಲ. ದೇಶದ

ಮೇಲೆ ಇಂತಹ ಗಂಡಾಂತರ ಬಂತು, ಏಕೆ ಬಂತು, ಏನು ಸುದ್ದಿ ಎನ್ನುವಂತಹ ವಿಚಾರಕ್ಕೆ ಹೇಳುತ್ತಿದ್ದೇನೆಯೇ ಹೊರತಾಗಿ ರಾಜ್ಯ ಸರ್ಕಾರ ಇದಕ್ಕೆ ಜವಾಬ್ದಾರಿ ಎಂದು ನಾನು ಏನು ಹೇಳಿಲ್ಲ. ರಾಜ್ಯ ಸರ್ಕಾರ ಇದಕ್ಕೆ ಜವಾಬ್ದಾರಿ ಅಲ್ಲ, ಆದರೆ ಇಲ್ಲಿ ಸುಮಾರು 80 ಜನ ಸತ್ತಿದ್ದಾರೆ. ಘಟನೆ ಆಗಿದ್ದು ಅಯೋಧ್ಯೆಯಲ್ಲಿ, ಆದರೆ ಇಲ್ಲಿ 80 ಜನ ಸತ್ತಿದ್ದಾರೆ. ಅನೇಕ ಜನರಿಗೆ ಗಾಯಗಳಾದವು. ಅನೇಕರು ಮನೆ, ಸಂಸಾರ ಮತ್ತು ಅನೇಕ ಪ್ರಾಪರ್ಟಿಗಳನ್ನು ಕಳೆದುಕೊಂಡಿದ್ದಾರೆ. ಪ್ರೊಡಕ್ಷನ್ ಲಾಸ್ ಆಯಿತು. ಇದು ಏತಕ್ಕೆ ಆಯಿತು ಇದು ಅಯೋಧ್ಯೆಯಲ್ಲಿ ಆಗಿದ್ದು, ಅಯೋಧ್ಯೆಯಲ್ಲಿ ಆಗಬೇಕಾಗಿತ್ತು. ಇದು ಅಯೋಧ್ಯೆಗೆ ನಿಶ್ಚಿತವಾಗಿಲ್ಲ. ಇದು ಉತ್ತರ ಪ್ರದೇಶಕ್ಕೆ ಸೀಮಿತವಾದಂತಹ ಪ್ರಶ್ನೆ ಅಲ್ಲ. ಇದು ದೇಶಕ್ಕೆ ಸಂಬಂಧಪಟ್ಟ ಪ್ರಶ್ನೆ ಆಗಿರುವುದರಿಂದ ನಾನು ಈ ವಿಚಾರಗಳನ್ನು ಹೇಳುತ್ತೇನೆ. ನಾನು ಹೇಳುವ ಮುಂಚೆ, ನನ್ನ ಭಾಷಣದಲ್ಲಿ ಮುಖ್ಯ ಮಂತ್ರಿಗಳು ಇದಕ್ಕೆ ಜವಾಬ್ದಾರರು, ಮುಖ್ಯ ಮಂತ್ರಿಗಳು ಇದಕ್ಕೆ ಜವಾಬು ಕೊಡಬೇಕೆಂದು ನಾನು ಇಲ್ಲಿ ಹೇಳಿಲ್ಲ. ಇದು ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ ಅಲ್ಲ. ದೇಶದ ಮೇಲೆ ಆಘಾತ ಆಗಿದೆ.

ದೇಶದ ಮೇಲೆ ಇಂತಹ ಪರಿಸ್ಥಿತಿ ಬಂದಿದೆ. ದೇಶದ ಪ್ರಜಾತಂತ್ರಕ್ಕೆ ಮತ್ತು ದೇಶದ ಸೆಕ್ಯುಲರಿಸಮ್‌ಗೆ ಬಹಳ ದೊಡ್ಡ ಆಘಾತವಾಗಿದೆ. ಇದರ ಬಗ್ಗೆ ನಾವೆಲ್ಲರೂ ವಿಚಾರ ಮಾಡಬೇಕೆಂದು ನಾನು ಹೇಳುತ್ತೇನೆ. ಆದರೆ ಮಾನ್ಯ ಖರ್ಗೆಯವರು ಇದು ನಾವು ವಿಚಾರ ಮಾಡಬೇಕೇ ಇಲ್ಲವೇ ಪಾರ್ಲಿಮೆಂಟಿನಲ್ಲಿ ವಿಚಾರ ಮಾಡಬೇಕೇ ಎಂದು ಹೇಳಿದರು. ಅದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ, ನಾನು ಈ ದೇಶದ ಒಬ್ಬ ನಾಗರಿಕನಾಗಿದ್ದೇನೆ. ಅದಕ್ಕಾಗಿ ನನಗೆ ಎಷ್ಟು ಅಧಿಕಾರ ಇದೆಯೋ ಅಷ್ಟನ್ನು ನಾನು ಮಾಡುತ್ತೇನೆ. ನಾನು ಪಾರ್ಲಿಮೆಂಟ್‌ನಲ್ಲಿಯೂ ಕೂಡ ಸದಸ್ಯನಾಗಿದ್ದೆ. ಅಲ್ಲಿ ಕೆಲಸ ಮಾಡಿದ್ದೇನೆ. ಅಲ್ಲಿ ವಿಧಾನಸಭೆಯ ಒಬ್ಬ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಆದರೆ ಎಲ್ಲದಕ್ಕೂ ಮೊದಲು ನಾನು ಈ ದೇಶದ ನಾಗರಿಕನಾಗಿ ಈ ವಿಚಾರಗಳನ್ನು ಹೇಳುತ್ತಿದ್ದೇನೆಯೇ ಹೊರತಾಗಿ ಪಾರ್ಟಿ ವಿಚಾರದಿಂದ ನಾನು ಇದನ್ನು ಹೇಳುತ್ತಿಲ್ಲ ಎನ್ನುವಂತಹದ್ದನ್ನು ತಾವು ಗಮನದಲ್ಲಿಡಬೇಕು. ಅಲ್ಲದೆ ಮುಖ್ಯಮಂತ್ರಿಗಳಿಗೆ ಜವಾಬು ಕೊಡಿ ಎಂದು ನಾನೇನು ಹೇಳಿಲ್ಲ ಮತ್ತು ಅದನ್ನು ಅವರಿಂದ ನಿರೀಕ್ಷೆ ಮಾಡುವ ಹಾಗೆ ಇಲ್ಲ. ನಾನು ಏನು ಹೇಳಿದ್ದೇನೆ. ಅದೆಲ್ಲಾ ಪೇಪರ್‌ನಲ್ಲಿ ಬಂದಿದೆ; ನಾನು ಹುಟ್ಟಿಸಿಕೊಂಡು ಹೇಳುತ್ತಿಲ್ಲ. ಎಲ್ಲರೂ ಯಾವ ರೀತಿಯಿಂದ ಓದುತ್ತಾರೋ ನಾನು ಅದೇ ರೀತಿಯಿಂದ ಪೇಪರನ್ನು ಓದುತ್ತಿದ್ದೇನೆ. ಪೇಪರಿನಲ್ಲಿ ಓದಿದಂತಹ ಸುದ್ದಿಗಳನ್ನು ನಾನು ಹೇಳುತ್ತಿದ್ದೇನೆ. ನಾವೆಲ್ಲರೂ ವಿಚಾರ ಮಾಡಬೇಕು. ದೇಶದಲ್ಲಿ ಯಾವ ರೀತಿ ಸೆಕ್ಯುಲರಿಸಮ್ ಉಳಿಸಿಕೊಳ್ಳಬೇಕೆನ್ನುವುದನ್ನು ನಾವು ವಿಚಾರ ಮಾಡಬೇಕು ಎಂದು ಹೇಳಿದರೆ ಇದು ಪಾರ್ಲಿಮೆಂಟ್ ವಿಚಾರ ಪ್ರಶ್ನೆ, ನಾವು ವಿಚಾರ ಮಾಡುವ ಪ್ರಶ್ನೆ ಅಲ್ಲ ಎಂದರೆ ನಾನೇನು ಹೇಳಲಿ. ಆದಕ್ಕಾಗಿ ಇದನ್ನು ನಾನು ಒಪ್ಪಲಿಕ್ಕೆ ಆಗುವುದಿಲ್ಲ.

ಛೇರ್ಮನ್:– ತಮಗೆ ಇನ್ನೂ ಎಷ್ಟು ಸಮಯ ಬೇಕಾಗಿದೆ.

ಶ್ರೀ ವೀರೇಂದ್ರ ಪಾಟೀಲ್:– ನಾನು ಕೆಲವು ಉದಾಹರಣೆಗಳನ್ನು ಹೇಳುತ್ತಿದ್ದೇನೆ. ಏಕೆ ರೆಸ್‌ಪೆಕ್ಟ್ ಫಾರ್ ಅಥಾರಿಟಿ, ರೆಸ್‌ಪೆಕ್ಟ್ ಫಾರ್ ಲಾ ಅಂಡ್ ಆರ್ಡರ್ ನಮ್ಮ ದೇಶದಲ್ಲಿ ಕಡಿಮೆ ಆಗುತ್ತಿದೆ ಎಂದು ನಾನು ಹೇಳುತ್ತಿದ್ದೇನೆ. ಇದು ನಮ್ಮ ದೇಶದಲ್ಲಿ ಕಡಿಮೆ ಆದರೆ ಕರ್ನಾಟಕ ಉಳಿಯುತ್ತದೆಯೇ ? ಏಕೆಂದರೆ, ಇಂಡಿಯಾ ದೇಶದ ಒಂದು ಭಾಗ ಕರ್ನಾಟಕವೇ ಹೊರತಾಗಿ ಕರ್ನಾಟಕದ ಒಂದು ಭಾಗ ಇಂಡಿಯಾ ಅಲ್ಲ. ಅದಕ್ಕಾಗಿ ಇಂಡಿಯಾದಲ್ಲಿ ಏನಾಗುತ್ತದೋ ಕರ್ನಾಟಕದಲ್ಲಿಯೂ ಅದೇ ಆಗುತ್ತದೆ. ಅದಕ್ಕಾಗಿ ನಾನು ಇವತ್ತು ಏನು ಮಾಡುತ್ತಿದ್ದೇನೆ ಅಂದರೆ ಇಂಡಿಯಾ ಬಗ್ಗೆ ಮಾತನಾಡುತ್ತಿದ್ದೇನೆ, ನಮ್ಮ ದೇಶದ ಬಗ್ಗೆ ಮಾತನಾಡುತ್ತಿದ್ದೇನೆಯೇ, ಹೊರತಾಗಿ

ಕರ್ನಾಟಕದ ಬಗ್ಗೆ ಮಾತನಾಡುತ್ತಿಲ್ಲ ಎನ್ನುವುದನ್ನು ನಾನು ಸ್ಪಷ್ಟಪಡಿಸಬೇಕಾಗುತ್ತದೆ. ಇನ್ನು ನಾನು ಹೆಚ್ಚು ಟೈಂ ತೆಗೆದುಕೊಳ್ಳುವುದಿಲ್ಲ, ಇನ್ನೊಂದು ಹತ್ತು ನಿಮಿಷಗಳಲ್ಲಿ ಮುಗಿಸಿಬಿಡುತ್ತೇನೆ.

ಈಗ ಬಿ.ಜೆ.ಪಿ. ಸರ್ಕಾರದವರು ನಾಲ್ಕು ಕಡೆ ಏನು ಬೇಸ್‌ಮೆಂಟ್ ಹಾಕಿದ್ದರು ಅದನ್ನೆಲ್ಲಾ ನಾನು ಹೇಳಿದ್ದೇನೆ. ಮತ್ತೊಮ್ಮೆ ಅದರ ಬಗ್ಗೆ ಹೇಳುವ ಅಗತ್ಯವಿಲ್ಲ. ಅಲ್ಲಿ ಮತ್ತೆ ಬಿ.ಜೆ.ಪಿ. ಸರ್ಕಾರ ಬರುವುದಿಲ್ಲವೆನ್ನುವ ಖಾತರಿಯಾದರೂ ಏನಿದೆ ? ಒಂದು ವೇಳೆ ಬಿ.ಜೆ.ಪಿ. ಇನ್ನೊಂದು ಸಲ ಆರಿಸಿ ಬಂದರೆ ಏನು ಮಾಡಬೇಕು ? ಆಗ ನಮ್ಮ ಗತಿ ಏನು ಎನ್ನುವಂತಾದ್ದರ ಬಗ್ಗೆ ನಾವೆಲ್ಲರೂ ವಿಚಾರ ಮಾಡಬೇಕು. ಒಂದು ವೇಳೆ ಮಧ್ಯಪ್ರದೇಶದಲ್ಲಾಗಲಿ, ರಾಜಸ್ಥಾನದಲ್ಲಾಗಲಿ, ಹಿಮಾಚಲ ಪ್ರದೇಶದಲ್ಲಾಗಲಿ ಮತ್ತು ಉತ್ತರ ಪ್ರದೇಶದಲ್ಲಿ ಆಗಲಿ ಜನರು ಮತ್ತೆ ಬಿ.ಜೆ.ಪಿ.ಯನ್ನು ಆರಿಸಿ ಕಳುಹಿಸಿದರೆ ನೀವೇನು ಮಾಡುತ್ತೀರಿ ? ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಹಾರಾಷ್ಟ್ರದಲ್ಲಿ ಒಂದು ಘಟನೆ ನಡೆಯಿತು. ನಿಮ್ಮ ವಿಚಾರ ಬಂದದ್ದಕ್ಕಾಗಿ ನಾನು ಹೇಳುತ್ತಿದ್ದೇನೆ. ಒಬ್ಬ ಸದಸ್ಯ ಏನು ಮಾಡಿದನೆಂದರೆ, ಅವನು ಚಪ್ಪಲಿಯಲ್ಲಿ ಹೊಡೆದ. ಪ್ರತಿಮೆಗೆ ಹೊಡೆದನೋ ಅಥವಾ ಬೇರೆ ಸದಸ್ಯನಿಗೆ ಹೊಡೆದನೋ ಗೊತ್ತಿಲ್ಲ. ಅದು ಸರಿಯಾಗಿ ನನಗೆ ನೆನಪಿಲ್ಲ. ಅವನು ಆ ರೀತಿ ಚಪ್ಪಲಿಯಲ್ಲಿ ಹೊಡೆದದಕ್ಕಾಗಿ, ಆ ವಿಷಯ ಹಕ್ಕುಬಾಧ್ಯತೆಗಳ ಸಮಿತಿ ಮುಂದೆ ಬಂತು. ಆ ಸಮಿತಿಯಲ್ಲಿ ಏನು ತೀರ್ಮಾನ ತೆಗೆದುಕೊಂಡರೆಂದರೆ, ಇಂತಹ ಮನುಷ್ಯ ಇದ್ದರೆ ಅಸೆಂಬ್ಲಿಗೆ ಧಕ್ಕೆ ಬರುತ್ತದೆಂದು ತೀರ್ಮಾನಿಸಿ ಅವನನ್ನು ತೆಗೆದು ಹಾಕಿದರು. ಆಗ ಅವನ ಅಸೆಂಬ್ಲಿಯ ಸದಸ್ಯತ್ವ ಹೋಯಿತು. ಆರು ತಿಂಗಳ ನಂತರ ಚುನಾವಣೆಯಾಯಿತು. ಆತ ಮತ್ತೆ ಸದಸ್ಯನಾಗಿ ಆರಿಸಿ ಬಂದ. ಹಿಂದ ಚಪ್ಪಲಿಯಲ್ಲಿ ಹೊಡೆದ ವ್ಯಕ್ತಿಯೇ ಮತ್ತೆ ಆರಿಸಿ ಬಂದ. ಈ ರೀತಿಯ ವ್ಯಕ್ತಿಗಳನ್ನು ಆರಿಸಿ ಕಳುಹಿಸಿದರೆ ನೀವೇನು ಮಾಡುತ್ತೀರೆಂದು ನಾನು ಕೇಳುತ್ತೇನೆ. ಡೆಮಾಕ್ರಸಿಯಲ್ಲಿ ಜನತೆಗೆ ಅಧಿಕಾರವಿಲ್ಲ, ಎಲ್ಲ ನಮಗೆ ಅಧಿಕಾರವಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಒಂದು ವೇಳೆ ಅದೇ ರೀತಿಯಲ್ಲಿ ಉತ್ತರ ಪ್ರದೇಶದಲ್ಲಿ, ಮಧ್ಯಪ್ರದೇಶದಲ್ಲಿ, ರಾಜಸ್ಥಾನದಲ್ಲಿ ಮತ್ತು ಹಿಮಾಚಲ ಪ್ರದೇಶದಲ್ಲಿ ಮತ್ತೆ ಬಿ.ಜೆ.ಪಿ. ಸರ್ಕಾರ ಬಂದರೆ ನೀವೇನು ಮಾಡುತ್ತೀರಿ ? ಇನ್ನೊಮ್ಮೆ ಚುನಾವಣೆ ಮಾಡುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಮನಸ್ಸಿಗೆ ಬಂದಂತೆ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ನಾವೆಲ್ಲರೂ ಪ್ರಜಾಪ್ರಭುತ್ವದಲ್ಲಿದ್ದೇವೆ, ಚುನಾವಣೆಯನ್ನು ಮಾಡಲೇಬೇಕಾಗುತ್ತದೆ. ಒಂದು ವೇಳೆ ಅವರೇ ಮತ್ತೆ ಆರಿಸಿ ಬಂದರೆ ಏನು ಮಾಡುತ್ತೀರಿ ಎನ್ನುವ ಪ್ರಶ್ನೆ ಇದೆ. ನಾನು ಇತ್ತೀಚೆಗೆ ಹೇಳಿದ್ದೆ; ಏನೆಂದರೆ, ನಾವು ಮಧ್ಯಪ್ರದೇಶ, ಬಿಹಾರ ಮತ್ತು ಉತ್ತರ ಪ್ರದೇಶದಲ್ಲಿ ಚುನಾವಣೆಯಲ್ಲಿ ಸೋಲುತ್ತೇವೆಂದು. ಇದಕ್ಕೆ ಕಾರಣರಾರು ? ನಾವು ಕಾರಣವೇ ? ಕರ್ನಾಟಕದ ಜನರು ಕಾರಣರೇ ? 1989ರ ನವೆಂಬರ್ ತಿಂಗಳಿನಲ್ಲಿ ಚುನಾವಣೆಯಾದಾಗ ಬಿ.ಜೆ.ಪಿ.ಯದು ಕೇವಲ ಎರಡೂವರೆ ಪರ್ಸೆಂಟ್ ಇತ್ತು. ಅಲ್ಲಿಂದ, ಜೂನ್, 1991 ರಲ್ಲಿ ಲೋಕಸಭೆಗೆ ಚುನಾವಣೆಯಾದಾಗ ಬಿ.ಜೆ.ಪಿ.ಯವರಿಗಿದ್ದ ಎರಡೂವರೆ ಪರ್ಸೆಂಟ್‌ನಿಂದ 30 ಪರ್ಸೆಂಟ್ ಏರಿಕೆಯಾಯಿತು. ಹೀಗೇಕಾಯಿತು ಎಂಬುದನ್ನು ಯಾರಾದರೂ ವಿಚಾರ ಮಾಡಬೇಕು. ಏಕೆ ಹೀಗೆ ಹೆಚ್ಚಾಯಿತು ಎನ್ನತಕ್ಕಂಥಾದ್ದನ್ನು ಯಾರಾದರೂ ವಿಚಾರ ಮಾಡಿದ್ದೀರಾ ? ಪ್ರತಿಯೊಬ್ಬ ನಾಯಕರು ವಿಚಾರ ಮಾಡಿದ್ದಾರೆಯೇ ? ಇದರ ಬಗ್ಗೆ ವಿಚಾರ ಮಾಡಿದ್ದೇವೆಂದು ಯಾರಾದರೂ ಹೇಳಿದರೆ ಆ ಮಾತು ಬೇರೆ. ಅದಕ್ಕೆ ನಾನು ಭಾಷಣದಲ್ಲಿ ಹೇಳಿದೆ. ದೇಶದಲ್ಲಿ ಭಯೋತ್ಪಾದಕತೆ ಹೆಚ್ಚಾಗುತ್ತಿದೆ, ಜಾತೀಯತೆ ಹೆಚ್ಚಾಗುತ್ತಿದೆ, ಪ್ರಾಂತೀಯತೆ ಹೆಚ್ಚಾಗುತ್ತಿದೆ, ಕಾನೂನು ಮತ್ತು ಸುವ್ಯವಸ್ಥೆ ಮತ್ತು ಅಥಾರಿಟಿಯ ಗೌರವಗಳು ಕಡಿಮೆಯಾಗುತ್ತಿವೆ. ಇದರ ಬಗ್ಗೆ ತಾವುಗಳೆಲ್ಲರೂ ಕುಳಿತು ವಿಚಾರ ಮಾಡಬೇಕೆಂದು ನಾನು ಪ್ರಾರಂಭದಲ್ಲಿಯೇ ಹೇಳಿದೆ. ಇದರ ಬಗ್ಗೆ ವಿಚಾರ ಮಾಡಬಾರದೇ ? ಇದು ಪಾರ್ಲಿಮೆಂಟ್ ಸ್ವತ್ತೇ, ನಮ್ಮ ಸ್ವತ್ತು ಅಲ್ಲವೇ ? ದೇಹದ ಯಾವುದೇ ಒಂದು ಭಾಗದಲ್ಲಿ ಏನಾದರೂ ಆದರೆ ನಮಗೆ

ಬೇನೆ ಆಗುವಹಾಗಿಲ್ಲವೇ ? ನಮ್ಮ ದೇಹದ ಯಾವುದಾದರೂ ಒಂದು ಭಾಗದಲ್ಲಿ ಮುಳ್ಳು ಹೊಕ್ಕಿದರೆ ಇಡೀ ದೇಹಕ್ಕೇ ತ್ರಾಸ ಆಗುತ್ತದೆ. ಆ ರೀತಿಯಿಂದ ನಮ್ಮ ದೇಶ ಒಂದು ಎಂದು ಹೇಳಬೇಕಾಗಿದೆ. ಇಲ್ಲದಿದ್ದರೆ, ಇದು ಬಿಹಾರ್‌ನಲ್ಲಿ ಆಗಿದೆ, ಇದು ನಮ್ಮ ಸಮಸ್ಯೆಯಲ್ಲವೆಂದೂ ಇದು ಉತ್ತರ ಪ್ರದೇಶದಲ್ಲಾಗಿದೆ, ಇದು ನಮ್ಮ ಸಮಸ್ಯೆಯಲ್ಲವೆಂದೂ ಇದು ಬೇರೆ ರಾಜ್ಯದಲ್ಲಾಗಿದೆ, ಆದುದರಿಂದ, ಇದು ನಮ್ಮ ಸಮಸ್ಯೆ ಅಲ್ಲವೆಂದೂ ಇದು ಕರ್ನಾಟಕದಲ್ಲಾಗಿದೆ. ಇದು ನಮ್ಮ ಸಮಸ್ಯೆ ಎಂದು ಈ ರೀತಿ ತಿಳಿಯುವವರಿದ್ದರೆ, ಅವರು ತಿಳಿದುಕೊಂಡು ಹೋಗಲಿ. ನಾನು ಆ ರೀತಿ ಹೇಳುವ ಹಾಗಿಲ್ಲ. ಅವೆಲ್ಲಾ ನಮ್ಮ ದೇಶದ ಅವಿಭಾಜ್ಯ ಅಂಗಗಳಾಗಿವೆಯೇ ಹೊರತು, ಅವು ಬೇರೆ ಅಲ್ಲವೆಂದು ನಾನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬಯಸುತ್ತೇನೆ. ನಂತರ ಕೇಂದ್ರ ಸರ್ಕಾರದವರು ಒಂದು ನಿರ್ಣಯ ಮಾಡಿದ್ದಾರೆ.

6.05 ಪಿ.ಎಂ.

ಅದೇನೆಂದರೆ, ಒಂದೇ ಜಾಗದಲ್ಲಿ ಮಂದಿರವನ್ನು ಮತ್ತು ಮಸೀದಿಯನ್ನು ಕಟ್ಟುತ್ತೇವೆಂದು. ನನಗೆ ಒಂದು ಕತೆ ನೆನಪಾಗುತ್ತದೆ. ನಮ್ಮ ಭಾಗದ ಹಳ್ಳಿ ಹಳ್ಳಿಗೆ ಹೋದರೆ ಆ ಕತೆಯನ್ನು ಹೇಳುತ್ತಾರೆ. ಆ ಕತೆಯನ್ನು ನಿಮ್ಮ ಮುಂದೆ ಹೇಳುತ್ತೇನೆ. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಆ ಕತೆ ಏನೆಂದರೆ: ಒಬ್ಬ ಶಾನುಭೋಗನಿದ್ದ, ಅವನಿಗೆ ದಿನಂಪ್ರತಿ ಜಗಳವಾಡದಿದ್ದರೆ ಅನ್ನ ಜೀರ್ಣವಾಗುತ್ತರಲಿಲ್ಲ, ಅವನಿಗೆ ಜಗಳ ಯಾವಾಗಲೂ ಇರಲೇಬೇಕು, ಅವನು ಸಾಯಲು ತಯಾರಾದ. ಆಗ ಅವನು ನಾನು ಸತ್ತ ಮೇಲೆ ಹಿಂದುಗಳು ಮತ್ತು ಮುಸಲ್ಮಾನರು ಶಾಂತ ರೀತಿಯಿಂದ ಇರುತ್ತಾರೆ, ಊರಿಗೆ ಶಾಂತಿ ಬರುತ್ತದೆ ಅಂದ ಮೇಲೆ ನಾನು ಹಾಕಿದ್ದ ಜಗಳ ಮುಂದುವರೆಯುವುದಿಲ್ಲ; ಏನು ಮಾಡುವುದೆಂದು ಯೋಚಿಸಿದ. ಅವನಿಗೆ ಸಾಯುವ ಬಗ್ಗೆ ಚಿಂತೆ ಇರಲಿಲ್ಲ. ಅವನಿಗೆ ಒಂದು ಐದಾರು ದಿನಗಳಲ್ಲಿ ಸಾಯುತ್ತೇನೆಂದು ಗೊತ್ತಿತ್ತು. ಆಗ ಅಲ್ಲಿನ ಹಿಂದು ಮುಖ್ಯಸ್ಥರನ್ನು ಕರೆಸಿ ನನಗೆ ಒಂದೇ ಒಂದು ಆಸೆ ಇದೆ ಅದನ್ನು ನೀವು ತೀರಿಸಿಕೊಡಬೇಕೆಂದು ಹೇಳಿದ. ಆಗ ಮುಖ್ಯಸ್ಥರು ಪಾಪ ಏನೋ ಮುದುಕ, ಏನು ಹೇಳುತ್ತಾನೋ ಕೇಳೋಣ, ಅವನ ಆಸೆ ಏನಿದೆ ಅದನ್ನು ತೀರಿಸಲು ಪ್ರಯತ್ನ ಮಾಡೋಣವೆಂದು ಹೋದರು. ಆಗ ಅವನು ನಾನು ಸತ್ತ ಮೇಲೆ ನನ್ನ ಹೆಣವನ್ನು ಮಸೀದಿಗೆ ತೆಗೆದುಕೊಂಡು ಹೋಗಿ ಹೂಳಿರಿ ಎಂದು ಹೇಳಿದ. ಅಂದರೆ ಅದರ ಅರ್ಥ ಏನೆಂದರೆ ತಾನು ಸತ್ತಮೇಲೂ ಊರಿನಲ್ಲಿ ಜಗಳವಿರಲಿ ಎಂದು; ಮಸೀದಿಗೆ ಹೆಣವನ್ನು ತೆಗುದುಕೊಂಡು ಹೋದರೆ ಮುಸಲ್ಮಾನರು ಇದು ನಮ್ಮ ಮಸೀದಿ ಇದರಲ್ಲಿ ಹೆಣವನ್ನು ತರಲು ಆಗುವುದಿಲ್ಲ ಎನ್ನುತ್ತಾರೆ, ಆಗ ಅವರಿಬ್ಬರಲ್ಲಿ ಜಗಳ ಆಗಲೇ ಬೇಕಾಗುತ್ತದೆ. ಒಂದು ವೇಳೆ ಹಿಂದೂ ಮತ್ತು ಮುಸಲ್ಮಾನರು ಇಬ್ಬರೂ ಸೇರಿ ಬದಿಯಲ್ಲಿ ಮಂದಿರ ಬರಲಿ, ಇಲ್ಲಿ ಮಸೀದಿ ಬರಲಿ ಎಂದರೆ ಅಡ್ಡಿ ಇಲ್ಲ. ಆ ರೀತಿ ಬರಬಹುದು. ಏಕೆಂದರೆ ಅದು ನಮ್ಮ ದೇಶದ ಐಕ್ಯತೆಗೆ ಮತ್ತು ಸಮಗ್ರತೆಗೆ ಸಿಂಬಲ್ ಆಗುತ್ತದೆ. ಒಂದು ವೇಳೆ ಅವರು ಇಲ್ಲಾ, ಇಲ್ಲಿಗೆ ಮಂದಿರವೇ ಬರಬೇಕೆಂದು ಕೆಲವರು ಹಠ ಹಿಡಿದರೆ ಅಥವಾ ಕೆಲವರು ಇಲ್ಲಾ, ಇಲ್ಲಿಗೆ ಮಸೀದಿಯೇ ಬರಬೇಕೆಂದು ಹಠ ಇಟ್ಟುಕೊಂಡರೆ ಇದು ಕಷ್ಟವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಒಂದು ವೇಳೆ ಹಿಂದೂಗಳೂ ಮತ್ತು ಮುಸಲ್ಮಾನರೂ ಇಬ್ಬರೂ ಕಲೆತು ಇಲ್ಲಿ ಮಸೀದಿಯೂ ಬರಲಿ ಮಂದಿರವೂ ಬರಲಿ, ನಾವು ಸರಿಹೋಗುತ್ತೇವೆಂದು ಹೇಳಿದರೆ ಆ ಮಾತು ಬೇರೆ. ಆ ರೀತಿಯಿಂದ ಅವರು ವಿಚಾರ ಮಾಡಬೇಕು. ಒಂದು ವೇಳೆ ಆ ರೀತಿ ಮಾಡಲಾರದೆ ಹೋದರೆ ಮತ್ತು ಒಂದೇ ಸ್ಥಳದಲ್ಲಿ ಮಂದಿರವನ್ನು ಮತ್ತು ಮಸೀದಿಯನ್ನು ಎರಡನ್ನೂ ಕಟ್ಟುತ್ತೇವೆಂದರೆ ಅದು ತಪ್ಪಾಗುತ್ತದೆಂಬ ನನ್ನ ವೈಯಕ್ತಿಕವಾದಂಥ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನನ್ನ ವಿಚಾರದಲ್ಲಿ ಹಿಂದೂಗಳು ಮತ್ತು ಮುಸಲ್ಮಾನರು ಇವರಿಬ್ಬರೂ ಒಂದಾಗುವುದಿಲ್ಲ. ಇಲ್ಲಾ ಇಲ್ಲಿ ಮಂದಿರ ಬರಬೇಕು ಅಥವಾ

ಮಸೀದಿ ಬರಬೇಕು. ಯಾವುದಾದರೊಂದು ಬರಬೇಕೇ ಹೊರತು ಎರಡೂ ಬಂದರೆ ಮತ್ತೆ ಜಗಳವಾಗುತ್ತದೆ ನಾನು ಹೇಳಿದ ಕತೆಯಂತಾಗುತ್ತದೆ, ಅದೇ ಗತಿ ಬರುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಇನ್ನೊಮ್ಮೆ ನನ್ನ ಮಾತನ್ನು ಸ್ಪಷ್ಟಪಡಿಸುತ್ತೇನೆ. ಏಕೆಂದರೆ, ಮುಖ್ಯಮಂತ್ರಿಗಳಿದ್ದಾರೆ. ನಾನು ಇವೆಲ್ಲಾ ವಿಚಾರಗಳನ್ನು ಒಬ್ಬ ನಾಗರೀಕನಾಗಿ ಮತ್ತು ಒಬ್ಬ ಕಾಂಗ್ರೆಸ್ ಸದಸ್ಯನಾಗಿ ಹೇಳಿದ್ದೇನೆಯೇ ಹೊರತು ಮತ್ತಾವ ದೃಷ್ಟಿಯಿಂದಲೂ ಅಲ್ಲ. ಮುಖ್ಯಮಂತ್ರಿಗಳು ಇದಕ್ಕೆ ಜವಾಬ್ದಾರರು ಎಂದು ನಾನು ಹೇಳಿಲ್ಲ ಅಥವಾ ಮುಖ್ಯಮಂತ್ರಿಗಳು ಇದಕ್ಕೆ ರಿಪ್ಲೆ ಮಾಡಬೇಕೆಂದು ನಾನು ಕೇಳಲಿಲ್ಲ. ಅವರು ಇದಕ್ಕೆ ರಿಪ್ಲೆ ಮಾಡಬೇಕೆಂದು ಹೇಳಿದರೆ ಅವರು ತಾನೆ ಹೇಗೆ ರಿಪ್ಲೇ ಮಾಡುತ್ತಾರೆ. ಕರ್ನಾಟಕದ ಪ್ರಶ್ನೆ ಏನೆಂದರೆ, ಕರ್ನಾಟಕದಲ್ಲಿ ಎಷ್ಟು ಜನ ಸತ್ತರು ? ಕರ್ನಾಟಕದಲ್ಲಿ ಸತ್ತವರಿಗೆ ಎಷ್ಟು ಪರಿಹಾರವನ್ನು ಕೊಟ್ಟಿದ್ದೇವೆ ? ಮತ್ತು ಯಾರ್ಯಾರು ಗಾಯಗೊಂಡಿದ್ದಾರೆ ಅವರಿಗೆ ಎಷ್ಟು ಪರಿಹಾರವನ್ನು ಕೊಟ್ಟಿದ್ದೇವೆ ? ಯಾರ್ಯಾರ ಆಸ್ತಿ ಹೋಗಿದೆ, ಅವರಿಗೆ ಎಷ್ಟು ಪರಿಹಾರವನ್ನು ಕೊಟ್ಟಿದ್ದೇವೆ ? ಯಾವ ರೀತಿಯಲ್ಲಿ ಕರ್ನಾಟಕದಲ್ಲಿ ಶಾಂತಿ ನೆಲೆಸಲು ಪ್ರಯತ್ನ ಮಾಡಿದ್ದಾರೆ ಎನ್ನುವುದನ್ನು ಹೇಳಬಹುದೇ ಹೊರತು ಬೇರೆ ಹೇಳುವಂತಾಗುವುದಿಲ್ಲ. ದೇಶದಲ್ಲಿ ಜಾತ್ಯಾತೀತತೆ ಉಳಿಯಬೇಕು. ಪಾರ್ಲಿಮೆಂಟ್‌ನಲ್ಲಿ ಚರ್ಚೆ ಮಾಡಬೇಕು ಎನ್ನತಕ್ಕಂಥ ನನ್ನ ವಿಚಾರಗಳನ್ನು ನಿಮ್ಮ ಮುಂದೆ ಹೇಳಿದ್ದೇನೆಯೇ ಹೊರತು ಸರ್ಕಾರ ಇದರ ಬಗ್ಗೆ ಏನಾದರೂ ನಿಲುವನ್ನು ನಮ್ಮ ಮುಂದೆ ಹೇಳಬೇಕೆಂದು ನಾನು ಹಿಂದೂ ಹೇಳಿಲ್ಲ ಮತ್ತೆ ಆ ರೀತಿ ಹೇಳುವಂತೆಯೂ ಇಲ್ಲ. ಇವತ್ತು ಮೊದಲ ಸಲ ನಮ್ಮ ದೇಶದಲ್ಲಿ ಇಂತಹ ಗಂಡಾಂತರ ಬಂದಿದೆ, ಮೊದಲ ಸಲ ನಮ್ಮ ದೇಶದ ಇಮೇಜ್ ಬಹಳ ಕಡಿಮೆಯಾಗಿದೆ. ಎರಡನೆಯದಾಗಿ ನೆರೆರಾಷ್ಟ್ರಗಳವರು ನಮ್ಮ ಮೇಲೆ ವಿಶ್ವಾಸ ಮಾಡಲಾರದಂಥ ಪರಿಸ್ಥಿತಿ ಮೊದಲನೇ ಸಲ ಬಂದಿದೆ. ಆದಕ್ಕಾಗಿ ಇದರ ಬಗ್ಗೆ ಪ್ರತಿಯೊಬ್ಬ ನಾಗರೀಕರೂ ನಾವೆಲ್ಲರೂ ವಿಚಾರ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಾನು ಕೊನೆಯದಾಗಿ ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ಇಂಥ ಕಠಿಣ ಪರಿಸ್ಥಿತಿಗೆ ನಮ್ಮ ದೇಶ ಹೋಗುತ್ತಿದೆ. ನಮ್ಮ ದೇಶದ ಪ್ರಜಾಪ್ರಭುತ್ವ ಉಳಿಯಬೇಕಾದರೆ, ನಮ್ಮ ದೇಶದ ಜಾತ್ಯಾತೀತತೆಯು ಉಳಿಯಬೇಕಾದರೆ ಮಹಾತ್ಮಗಾಂಧಿಯವರು ಹೋದಂಥ ಮಾರ್ಗದಲ್ಲಿ ಹೋದರೆ ಮಾತ್ರ ಸಾಧ್ಯ. ನಮ್ಮ ದೇಶದಲ್ಲಿ ಸ್ವಾತಂತ್ರ್ಯದ ಸಾಧ್ಯತೆಗಳಿಲ್ಲದಿದ್ದರೆ ನಮ್ಮ ದೇಶವು ಮಾರಾಬಟ್ಟೆಯಾಗುತ್ತದೆ. ನಮ್ಮ ದೇಶವು ಹರಿದು ಹಂಚಿ ಹೋಗುತ್ತದೆಯೇನೋ ಎನ್ನತಕ್ಕಂಥ ಭಯ ನನ್ನ ಮನಸ್ಸಿನಲ್ಲಿದೆ ಎನ್ನತಕ್ಕ ಮಾತನ್ನು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

ಮುಖ್ಯ ಮಂತ್ರಿಗಳ ಹೇಳಿಕೆ

ಬೈಲಹೊಂಗಲದಲ್ಲಿ ನಡೆದ ಘಟನೆ ಬಗ್ಗೆ.

ಶ್ರೀ ಎಂ. ವೀರಪ್ಪಮೊಯಲಿ (ಮುಖ್ಯ ಮಂತ್ರಿಗಳು):– ಮಾನ್ಯ ಉಪಾಧ್ಯಕ್ಷಿಣಿಯವರೆ,

1) ಇವತ್ತು ಬೆಳಿಗ್ಗೆ 10.30 ಗಂಟೆ ಸುಮಾರಿಗೆ ಬೈಲಹೊಂಗಲ ನಗರದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ಕಾಲೇಜಿನ ಆವರಣದ ಸಮೀಪದಲ್ಲಿರುವ ಎನ್.ಸಿ.ಸಿ ಕ್ಯಾಂಪಿನಲ್ಲಿ ಬೈಲಹೊಂಗಲ ಪೋಲೀಸರು ಅರ್ಧ ವಾರ್ಷಿಕ ಗುಂಡು ಹಾರಿಸುವ ಅಭ್ಯಾಸವನ್ನು ಮಾಡುತ್ತಿದ್ದರು. ಬೈಲಹೊಂಗಲ ಪೋಲೀಸರು ಇದೇ ಸ್ಥಳದಲ್ಲಿ ಗುಂಡು ಹಾರಿಸುವ ಅಭ್ಯಾಸವನ್ನು ಸಾಮಾನ್ಯವಾಗಿ ವರ್ಷಕ್ಕೆ ಎರಡು ಬಾರಿ ಮಾಡುತ್ತಾರೆ. ಗುಂಡು ಹಾರಿಸುವ ಅಭ್ಯಾಸ ಮಾಡುವ ಸ್ಥಳ ಕೆಳಮಟ್ಟದಲ್ಲಿದ್ದು ಕಿತ್ತೂರು ರಾಣಿ ಚೆನ್ನಮ್ಮ ಕಾಲೇಜು ಆವರಣವೂ ಸ್ವಲ್ಪಮಟ್ಟಿಗೆ ಮೇಲ್ಮಟ್ಟದಲ್ಲಿರುತ್ತದೆ. ಈ ರೀತಿ ಗುಂಡು ಹಾರಿಸುವ ಅಭ್ಯಾಸ ಮಾಡುತ್ತಿದ್ದಾಗ, ಪೋಲೀಸರು ಹಾರಿಸಿದ ಒಂದು ಗುಂಡು ಆಕಸ್ಮಾತ್ತಾಗಿ ಕಿತ್ತೂರು